# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 142 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 05.12.2024 • ಗುರುವಾರ • ಪುಟ:04 • ಬೆಲೆ:2

Volume:02 • Issue: 142 • PRGI No:KARKAN/2023/88055 • VIJAYANAGARA • 05.12.2024 • Thursday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper







ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633068
e-mail: hampitimes@gmail.com


# ಉಚಿತ ವಿದ್ಯುತ್ ಸೌಲಭ್ಯಕ್ಕಾಗಿ ಮನೆಗಿರಲಿ ಸೋಲಾರ್ ರೂಫ್

## ಜೆಸ್ಕಾಂ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಾನ್ ವೆಸ್ಲಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**


ಕಟ್ಟಡಗಳಿಗೆ ಸೋಲಾರ್ ರೂಫ್ ಟಾಪ್ ಅಳವಡಿಸುವ ಮೂಲಕ ಉಚಿತ ವಿದ್ಯುತ್ ಸೌಲಭ್ಯ ಪಡೆದು ಕೊಳ್ಳಲು ಸರ್ಕಾರ ಪಿಎಂ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನೆ ರೂಪಿಸಿದೆ. ಗ್ರಾಹಕರು ಯೋಜನೆಗೆ ನೊಂದಾಯಿಸಿಕೊಂಡು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಹೊಸಪೇಟೆ ಜೆಸ್ಕಾಂ ನಗರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಾನ್ ವೆಸ್ಲಿ ಅವರು ತಿಳಿಸಿದರು.

ಹೊಸಪೇಟೆಯ ಚೆಸ್ಕಾಂ ಉಪವಿಭಾಗ-1 ಕಚೇರಿ ಆವರಣದಲ್ಲಿ ನಡೆದ ಸೂರ್ಯ ಘರ್ ಬಿಜಲಿ ಯೋಜನೆಯ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಈ ಯೋಜನೆ ಅಡಿಯಲ್ಲಿ ಸೌರ ಫಲಕಗಳನ್ನು ಸ್ಥಾಪಿಸಲು, ಮಾನದಂಡ ವೆಚ್ಚದ ಶೇ.60% ರಷ್ಟು ಸಹಾಯಧನ ರೂಪದಲ್ಲಿ ಒದಗಿಸಲಾಗುತ್ತದೆ. 1ಕಿಲೋವ್ಯಾಟ್‌ಗೆ 30 ಸಾವಿರ ರೂಪಾಯಿ, 2 ಕಿಲೋವ್ಯಾಟ್‌ಗೆ 60 ಸಾವಿರ ರೂಪಾಯಿ ಮತ್ತು 3ಕಿಲೋವ್ಯಾಟ್‌ಗೆ 78ಸಾವಿರ ರೂಪಾಯಿ ಸಹಾಯಧನ ನೀಡಲಾಗುವುದು, ತಮಗೆ ಸಾಕಾಗುವಷ್ಟು ವಿದ್ಯುತ್ ಬಳಸಿದ ಮೇಲೆ ವಿದ್ಯುತ್‌ನ್ನು ನಮ್ಮ ಇಲಾಖೆಗೆ ಮಾರಾಟ ಮಾಡಲು ಅವಕಾಶ ಇದೆ. ಮಾಹಿತಿಗಾಗಿ ಸಹಾಯವಾಣಿ 1912ಗೆ ಕರೆ ಮಾಡಬಹುದು ಅಥವಾ ಚೆಸ್ಕಾಂ ಉಪ ವಿಭಾಗದ ಕಚೇರಿಗೆ ಭೇಟಿ ನೀಡಿ ಹೆಸರು ನೊಂದಾಯಿಸಿಕೊಳ್ಳುವಂತೆ ಸಾರ್ವನಿಕರಿಗೆ ತಿಳಿಸಿದರು.

ನಗರದ ವಿಜಯನಗರ ಕಾಲೇಜು, ಪುನೀತ್ ರಾಜ ಕುಮಾರ್ ವೃತ್ತ, ಅಂಬೇಡ್ಕರ್ ವೃತ್ತ, ಬಸವೇಶ್ವರ ಬಡಾವಣೆ, ಪಟೇಲ್ ನಗರ, ಎಂ.ಜೆ.ನಗರ ಮತ್ತು ಚಿತ್ತವಾಡಗಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಜಾಗೃತಿ ಜಾಥಾ ನಡೆಸಿ ಸಾರ್ವಜನಿಕರಿಗೆ ಹಾಗೂ ಸರ್ಕಾರಿ ಅಧಿಕಾರಿ, ಸಿಬ್ಬಂದಿಗೆ ಕರಪತ್ರ ಹಂಚುವುದರ ಮೂಲಕ ಪಿಎಂ ಸೂರ್ಯಘರ್ ಮುಫ್ತ್ ಬಿಜಲಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಶಾಖಾಧಿಕಾರಿ ಗವಿಸಿದಪ್ಪ, ಭಿಮೇಶ, ಸಹಾಯಕ ಅಭಿಯಂತರರು (ತಾಂತ್ರಿಕ) ರಫೀಯಾ ಬೇಗಮ್ ಮತ್ತು ಇನ್ನಿತರ ಅಧಿಕಾರಿಗಳು ಹಾಗೂ ಸಿಬಂದಿಗಳಿದ್ದರು. ಜನರು ಮಾಹಿತಿ ಪಡೆದರು.

ಆನಂದ ಬಾಣ




ಮೈಕ್ರೋ ನ್ಯೂಸ್

## ಕುರಿ, ಮೇಕೆ ಘಟಕ ಅನುಷ್ಠಾನ: ಆರ್ಹರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಗಿರಿಜನ ಉಪಯೋಜನೆಯಡಿ ಪ್ರಸಕ್ತ ಸಾಲಿಗೆ ಕುರಿ, ಮೇಕೆ ಘಟಕ ಅನುಷ್ಠಾನಗೊಳಿಸಲು ಫಲಾನುಭವಿಗಳ ಆಯ್ಕೆಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಡಿಸೆಂಬರ್ 16 ಕೊನೆಯ ದಿನಾಂಕವಾಗಿರುತ್ತದೆ.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಲ್ಲಿ ನೊಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರುಗಳಿಗೆ ಆದ್ಯತೆ ನೀಡಲಾಗುವುದು. ಸಂಘಗಳು ಇಲ್ಲದೇ ಇರುವ ತಾಲ್ಲೂಕುಗಳಲ್ಲಿ ಕುರಿ ಸಾಕಾಣಿಕೆದಾರರನ್ನು ಫಲಾನುಭವಿಗಳನ್ನಾಗಿ ಪರಿಗಣಿಸಲಾಗುತ್ತದೆ. ಅರ್ಜಿಯನ್ನು ಸಂಬಂಧಿಸಿದ ತಾಲ್ಲೂಕು ಪಶು ಆಸ್ಪತ್ರೆಗಳಲ್ಲಿ ಪಡೆದುಕೊಳ್ಳಬಹುದು. ಜಾತಿ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ, ಬ್ಯಾಂಕ್ ಖಾತೆ ನಕಲು ಪತ್ರ, ಆಧಾರ ಕಾರ್ಡ್, ಮತದಾರರ ಚೀಟಿ, ರೇಷನ್ ಕಾರ್ಡ್ ನಕಲು ಪ್ರತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಅರ್ಜಿದಾರರು ತಾಲ್ಲೂಕು ಅಥವಾ ಹೋಬಳಿಯ ಕುರಿಗಾರರ ಸಹಕಾರ ಸಂಘದ ಸದಸ್ಯರಾಗಿರಬೇಕು. ಅವಶ್ಯವಿರುವ ಯೋಜನೆಗಳಿಗೆ ಮೊದಲೇ ಬ್ಯಾಂಕ್‌ನಿಂದ ಸಾಲ ಮಂಜೂರಾತಿ, ಸ್ವಂತ ವಂತಿಗೆ ಭರಿಸಲು ಬದ್ಧರಾಗಿರಬೇಕು ಎಂದು ಹೊಸಪೇಟೆಯ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ
ಈ ವಾರದ (06-12-2024) ವಿಷಯ
ಮನುಷ್ಯನ ಹೃದಯದ ಛೇದ ನೋಟದ
ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ?
ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿಯೊಂದಿಗೆ ವಾಟ್ಸಪ್ ನಂಬರ್: 9972603099 ಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ಕಳುಹಿಸಬಹುದು.


# ರಾ.ಸ.ನೌ.ಸಂ.ಜಿಲ್ಲಾಧ್ಯಕ್ಷರಾಗಿ ಮಲ್ಲಿಕಾರ್ಜನ ಗೌಡ ಆಯ್ಕೆ

## ಪರಿಷತ್ ಸದಸ್ಯರಾಗಿ ರಾಘವೇಂದ್ರ ಎಸ್.ಹೆಗಡಿಯಾಳ್, ಖಜಾಂಚಿಯಾಗಿ ಕೆ.ಮಲ್ಲೇಶಪ್ಪ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**





ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ವಿಜಯನಗರ ಜಿಲ್ಲಾ ಶಾಖೆಗೆ ನೂತನ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮಲ್ಲಿಕಾರ್ಜುನ ಗೌಡ ಅವರು 42 ಮತಗಳನ್ನು ಪಡೆದು ಎರಡನೆ ಅವಧಿಗೆ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ರಾಜ್ಯ ಪರಿಷತ್ ಸದಸ್ಯ ಹುದ್ದೆಗೆ ರಾಘವೇಂದ್ರ ಎಸ್.ಹೆಗಡಿಯಾಳ್ ಇವರು 51 ಮತಗಳು ಪಡೆದು ಆಯ್ಕೆಯಾದರೆ, ಜಿಲ್ಲಾ ಖಜಾಂಚಿ ಹುದ್ದೆಗೆ ಕೆ. ಮಲ್ಲೇಶಪ್ಪ 38 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ, ಪ್ರತಿಸ್ಪರ್ಧಿಗಳಾಗಿದ್ದ ರಾಜೀವ್ ಹೆಚ್. ಇವರು 21 ಮತ, ಸೈಯದ್ ಕಲೀಮ್ ಉಲ್ಲಾ-12 ಮತ, ಮಾಲತೇಶ ಮರೇಗೌಡರ್-25 ಮತಗಳನ್ನು ಪಡೆದಿದ್ದಾರೆ.

ನಗರದ ಸಂಡೂರು ರಸ್ತೆ, ನೌಕರರ ಭವನದಲ್ಲಿ ಬುಧವಾರ ನಡೆದ ಚುನಾವಣೆ ಮತದಾನ ಬೆಳಿಗ್ಗೆ 9 ರಿಂದ ಸಂಜೆ 4 ವರೆಗೆ ಶಾಂತಿಯುತವಾಗಿ ನಡೆಯಿತು. ನಂತರ ಮತ ಎಣಿಕೆ ಕಾರ್ಯ ನಡೆಸಿ ಫಲಿತಾಂಶ ಘೋಷಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಲಿಯಾ ಖತ್ ಅಲಿ ತಿಳಿಸಿದ್ದಾರೆ. ಸಹಾಯಕ ಚುನಾವಣಾಧಿಕಾರಿಯಾಗಿ ಗುರುಬಸವರಾಜ್ ಹೆಚ್. ಎಂ ಕಾರ್ಯನಿರ್ವಹಿಸಿದರು.

ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಇಬ್ಬರು ಸ್ಪರ್ಧಿಗಳ ನಡುವೆ ತೀವ್ರ ಪೈಪೋಟಿ ನಡೆದಿತ್ತು. ತೆರೆಮರೆಯಲ್ಲಿ ನಡೆಸಿದ ನಾನಾ ರೀತಿಯ ಕಸರತ್ತುಗಳು ರಾಜಕೀಯಕ್ಕಿಂತಲೂ ಮಿಗಿಲಾದ ರೀತಿಯಲ್ಲಿ ನೌಕರರ ಸಂಘದ ಚುನಾವಣೆ ನಡೆದಿದೆ ಎಂಬ ಮಾತುಗಳು ದಟ್ಟವಾಗಿ ಕೇಳಿಬಂದವು.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE READERS
**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)
**Display Advertisements**
Examples: Brand promotions, Product launches, Corporate announcements
**Public Notices and Announcements**
Examples: Tender notices, Government announcements, Legal notices, Obituaries
**Recruitment Advertisements**
Examples: Company job openings, Walk-in interviews, Recruitment drives
**Health and Wellness Advertisements**
Examples: Hospitals or clinics, Medical equipment, Health supplements
**Educational Advertisements**
Examples: College admissions, Coaching center promotions, Training programs
**Event Advertisements**
Examples: Cultural programs, Exhibitions, Concerts or festivals
**Retail Advertisements**
Examples: Sales or discounts, New store openings
**Entertainment Advertisements**
Examples: Movie releases, TV show promotions, Theater events
**Political Advertisements**
Campaigns or announcements related to political parties or candidates.
**Real Estate Advertisements**
Ads for buying, selling, or renting property.
**Matrimonial Advertisements**
Personal ads for seeking marriage alliances. Examples: Bride or groom profiles, Community-specific ads
**Product Advertisements**
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com


# ಕನ್ನಡಿಗರೆಂದರೆ ಸಾಲದು ಕನ್ನಡವೇ ಉಸಿರಾಗಬೇಕು

## ಅಖಿಲ ಭಾರತೀಯ ಸಾಹಿತ್ಯ ಪರಿಷದ್ ತಾಲೂಕು ಅಧ್ಯಕ್ಷ ಅಶೋಕ್ ಉಪ್ಪಾರ ಅಭಿಮತ | ವಿಶೇಷ ಉಪನ್ಯಾಸ ಕಾರ್ಯಕ್ರಮ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಇಂಗ್ಲಿಷ್ ವ್ಯಾಮೋಹದಿಂದ ಮಾತೃಭಾಷೆಯಲ್ಲಿ ಕಲಬೆರಕೆ ಸೇರಿಸಿ ಮಾತನಾಡುವ ಶೈಲಿಯನ್ನು ಕೈಬಿಡಬೇಕು ಸ್ವಚ್ಛ ಕನ್ನಡ ಕಲಿಕೆಗೆ ಆದ್ಯತೆ ನೀಡಬೇಕು ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ತಾಲೂಕು ಅಧ್ಯಕ್ಷ ಅಶೋಕ್ ಉಪ್ಪಾರ ಹೇಳಿದರು.

ಪಟ್ಟಣದ ರಾಮನಗರದಲ್ಲಿನ ಶ್ರದ್ಧಾ ಯೋಗಕೇಂದ್ರದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವಿಜಯನಗರ ಜಿಲ್ಲಾ ಘಟಕ ಮತ್ತು ಹಬೊಹಳ್ಳಿ ತಾಲೂಕು ಘಟಕದಿಂದ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಭಾನುವಾರ ಮಾತನಾಡಿದರು. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. 17 ನೇ ಶತಮಾನದಲ್ಲಿ ಕವಿ ಮಹಾಲಿಂಗರಂಗ ಅನುಭಾವಮೃತದಲ್ಲಿ ಕನ್ನಡ ಭಾಷೆಯ ಬಗ್ಗೆ ಅದ್ಭುತವಾಗಿ ವರ್ಣಿಸಿದ್ದಾರೆ. ಕನ್ನಡ ಭಾಷೆಯನ್ನು ಸುಲಿದ ಬಾಳೆಹಣ್ಣಿನಂತೆ, ಸಿಗುರಿನ ಕಬ್ಬಿನಂತೆ, ಕುದಿಸಿ ಹಾರಿಸಿದ ಹಾಲಿನಂತೆ ಸುಲಭದ ಲಲಿತಹ ಕನ್ನಡ ಭಾಷೆಯನು ತಿಳಿದು ತನ್ನೊಳ ತಾನೇ ಮೋಕ್ಷ ಗಳಿಸಿಕೊಳ್ಳಬಹುದು ಎಂದು ಆಂಗ್ಲ ಭಾಷೆಯ ವ್ಯಾಮೋಹ ಸರಿಯೇ ಎಂದು ಪ್ರಶ್ನಿಸಿದರು. ಎಲ್ಲಾ ಭಾಷೆಗಳ ಕಲಿಕೆಗೆ ಉತ್ಸಾಹವಿದ್ದರೂ, ಕನ್ನಡ ಭಾಷೆ ಕಲಿಸುವ ಪ್ರೋತ್ಸಾಹವು ನಮ್ಮಲ್ಲಿರಲಿ. ಮಾತೃಭಾಷೆ ಬಳಕೆಯಲ್ಲಿ ಇಂಗ್ಲೀಷ್ ಸೇರಿಸಿ ಕಂಗ್ಲೀಷ್ ಮಾತನಾಡುವ ಶೈಲಿಯನ್ನು ಬಿಟ್ಟು ಸ್ವಚ್ಛ ಕನ್ನಡ ಮಾತನಾಡುವ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದರು.

ಬಳ್ಳಾರಿಯ ಮೇಧಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರಾದ ಡಾ.ಸುಮಾ.ವೈ ಉಪನ್ಯಾಸದಲ್ಲಿ ಮಾತನಾಡಿ, ಕಾವೇರಿ ನದಿಯಿಂದ ಗೋದಾವರಿ ನದಿಯ ವ್ಯಾಪ್ತಿಯವರೆಗೆ ಕನ್ನಡ ನಾಡು ಇತ್ತು ಎಂಬುದನ್ನು ಕವಿರಾಜಮಾರ್ಗ ಕೃತಿಯಲ್ಲಿ ಶ್ರೀವಿಜಯ ಬರೆದಿದ್ದಾರೆ. ಸರಿಸುಮಾರು ದೇಶದ ಅರ್ಧ ಭೂಭಾಗದಲ್ಲಿ ಕನ್ನಡ ನೆಲೆಸಿತ್ತು ಎಂದು ಅನೇಕ ಉದಾಹರಣೆ ಮೂಲಕ ತಿಳಿಯಬಹುದಾಗಿದೆ. ಬ್ರಿಟಿಷರ ಕಾಲದಲ್ಲಿ ವ್ಯಾಪಾರಕ್ಕಾಗಿ ಹಾಗೂ ಆಡಳಿತಾತ್ಮಕವಾಗಿ ಅನುಕೂಲವಾಗುವಂತೆ ಪ್ರಾದೇಶಿಕವಾಗಿ ವಿಭಜನೆ ಮಾಡುತ್ತ ಹೋದಂತೆ ಭಾಷಾವಾರು ಪ್ರಾಂತಗಳಾಗಿ ಮಾರ್ಪಟ್ಟವು. ಆದರೆ ಕನ್ನಡ ನಾಡು, ನುಡಿ ಸಾಹಿತ್ಯಕ್ಕೆ ರಾಷ್ಟ್ರೀಯತೆಯ ಪರಿಕಲ್ಪನೆಯಿಂದ ಅಧ್ಯಯನ ಮಾಡಿದಾಗ ದೇಶದ ಪ್ರಮುಖ ನಾಡು ಕರ್ನಾಟಕ ರಾಜ್ಯ ರಾಷ್ಟ್ರೀಯತೆಗೆ ಹೆಚ್ಚಿನ ಕೊಡುಗೆ ನೀಡಿದೆ ಎಂದರು.

ಅಭಾಸಾಪದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ದೇಶಪಾಂಡೆ ಪ್ರಾಸ್ತಾವಿಕ ನುಡಿದರು. ಜಿಲ್ಲಾ ಪದಾಧಿಕಾರಿಗಳಾದ ಅಭಿನಂದನ ಜೋಶಿ, ವೀರನಗೌಡ, ಪ್ರಮುಖರಾದ ಸಂತೋಷ ಪೂಜಾರ್, ಬ್ರಹ್ಮಾನಂದ ಗುತ್ತಲ್, ಆನಂದ್ ಕಡ್ಲಿ, ಕೊಟ್ರೇಶ್ ತಳವಾರ, ಮಂಜುನಾಥ್ ಕೌಲೂರು, ಯು.ವೀರೇಶ್, ವೀರೇಂದ್ರ ಉತ್ತಂಗಿ, ನವೀನ್ ಎಲಿಗಾರ, ದಿವಾಕರಗೌಡ ಇತರರಿದ್ದರು. ತಾಲೂಕು ಕಾರ್ಯದರ್ಶಿ ಎಲ್.ಶಿವಕುಮಾರ್ ಸ್ವಾಗತಿಸಿದರು, ಸವಿತಾ ರಮೇಶ್ ವಂದಿಸಿದರು. ರಮೇಶ್ ಬೆಲ್ಲಂಕೊಂಡ ನಿರ್ವಹಿಸಿದರು.

## ಸ್ಟುಡೆಂಟ್ ಕಾಲಂ

# ಮಿತಿ ಮೀರಿದ ತುಂಟತನ ಅಪಾಯಕಾರಿ



ಒಂದಾನೊಂದು ಊರು. ಆ ಊರ ಹೆಸರು ಸೋಮಪುರ. ಆ ಊರಿನಲ್ಲಿ ರಾಮಪ್ಪ ಎನ್ನುವ ಒಬ್ಬ ಹಾವಾಡಿಗ ವಾಸವಾಗಿದ್ದ. ಅವನಿಗೆ ಒಬ್ಬ ಮಗ ಇದ್ದನು. ಅವನ ಹೆಸರು ಶಾಮು. ಅವನು ಬಹಳ ತುಂಟತನ ಮಾಡುತ್ತಿದ್ದನು. ಅವನಿಗೆ ಒಂದು ಚಟ ಇತ್ತು. ಹಾವಿನ ಬುಟ್ಟಿಯ ಬಾಯಿ ತೆಗೆದು, ಹಾವು ಹೊರಗೆ ಬರುವಂತೆ ಮಾಡಿ ಜನರು ಹೆದರಿ ಓಡಿದಾಗ ಅವನು ಚಪ್ಪಾಳೆ ತಟ್ಟಿ ನಗುವುದೆಂದರೆ ಅವನಿಗೆ ತುಂಬಾ ಇಷ್ಟವಿತ್ತು. ಅವನ ತಂದೆ ಎಷ್ಟು ಬುದ್ಧಿ ಹೇಳಿದರು ಕೇಳುತ್ತಿರಲಿಲ್ಲ.

ಇದಕ್ಕಿದ್ದಂತೆ ಸೋಮಪುರಕ್ಕೆ ಬರಗಾಲ ಬಂದಿತು. ಸೋಮಪುರದ ಜನರು ಆ ಊರನ್ನು ಬಿಟ್ಟು ಪಕ್ಕದ ಊರಿಗೆ ಹೋಗಬೇಕಾಯಿತು. ಮಧ್ಯದಲ್ಲಿ ಒಂದು ನದಿ ದಾಟಿ ಹೋಗಬೇಕಿತ್ತು. ರಾಮಪ್ಪನ ಮಗನ ಜೊತೆಗೆ ಹಾವಿನ ಬುಟ್ಟಿಯೂ ಇತ್ತು. ಹಾವಾಡಿಗನ ಮಗನ ತುಂಟತನ ಎಲ್ಲರಿಗೂ ತಿಳಿದಿದ್ದರಿಂದ ಅವನನ್ನು ದೋಣಿಯಲ್ಲಿ ಕರೆದುಕೊಂಡು ಹೋಗಲು ದೋಣಿಯವ ಮತ್ತು ದೋಣಿಯಲ್ಲಿದ್ದವರು ಒಪ್ಪಲಿಲ್ಲ. ಅಯ್ಯೋ! ಏನು ಮಾಡೋದು ಎನ್ನುವಷ್ಟರಲ್ಲಿ ಅವನಿಗೆ ಒಂದು ಉಪಾಯ ಹೊಳೆಯಿತು.

ಅನಂತರ ಹಾವಡಿಗ ತನ್ನ ಮಗನ ಕೈ ಕಾಲು ಅಲುಗಾಡಿಸಲು ಆಗದಂತೆ ಹಗ್ಗದಿಂದ ಕಟ್ಟಿ ದೋಣಿಯ ಒಂದು ಮೂಲೆಯಲ್ಲಿ ಕೂಡಿಸಿದ. ಮಗನ ಪಕ್ಕದಲ್ಲಿ ಹಾವಿನ ಬುಟ್ಟಿ ಇಟ್ಟು ತಾನು ಅಲ್ಲೇ ಕುಳಿತ. ದೋಣಿ ಮುಂದೆ ಹೊರಟಿತು. ಆ ಹುಡುಗನಿಗೆ ಸುಮ್ಮನೆ ಕುಳಿತು ಬೇಜಾರಾಗಿತ್ತು. ಏನು ಮಾಡೋದು ಎನ್ನುವಷ್ಟರಲ್ಲಿ ಅವನಿಗೆ ಒಂದು ಉಪಾಯ ಹೊಳೆಯಿತು. ಆ ಕಡೆ ಈ ಕಡೆ ನೋಡಿದ. ತನ್ನ ಹತ್ತಿರದಲ್ಲೇ ಉದ್ದನೆಯ ಬಿದರಿನ ಕಡ್ಡಿಗಳ ಕಟ್ಟನ್ನು ಯಾರೋ ಇಟ್ಟಿದ್ದನ್ನು ಗಮನಿಸಿದ. ಅವನು ನಿಧಾನವಾಗಿ ಬಗ್ಗಿ ಹಲ್ಲಿನಿಂದ ಒಂದು ಉದ್ದನೆಯ ಬಿದರಿನ ಕಡ್ಡಿ ತೆಗೆದುಕೊಂಡು ಆ ಕಡ್ಡಿಯಿಂದ ಹಾವಿನ ಬುಟ್ಟಿಯ ಮುಚ್ಚಳವನ್ನು ಮೇಲೆತ್ತಿದ ಹೊರಗೆ ಬಂದು ಹಾವು ಅದೇ ದೋಣಿಯಲ್ಲಿರುವ ಒಬ್ಬ ವ್ಯಕ್ತಿಯ ಕಾಲನ್ನು ಸುತ್ತಿಕೊಂಡಿತು, ಕಾಲಲ್ಲಿ ಸುತ್ತಿಕೊಂಡಿದ್ದ ಹಾವನ್ನು ನೋಡಿ ಹೆದರಿದ ವ್ಯಕ್ತಿ ಹಾವು!.,, ಹಾವು!.,,, ಎಂದು ಜೋರಾಗಿ ಕಿರುಚತೊಡಗಿದ. ದೋಣಿಯಲ್ಲಿರುವವರ ಜೋರಾಗಿ ಕೂಗ ತೊಡಗಿದರು.

ಹಾವು ಸುತ್ತಿಕೊಂಡಿದ್ದ ವ್ಯಕ್ತಿ ದೋಣಿಯ ಇನ್ನೊಂದು ತುದಿಗೆ ಓಡಿದ. ಅದನ್ನು ನೋಡಿ ಎಲ್ಲರೂ ಅವನ ಹಿಂದೆಯೇ ದೋಣಿಯ ಇನ್ನೊಂದು ತುದಿಗೆ ಓಡಿ ಹೋದರು. ಆ ಕಡೆ ಬಹಳ ತೂಕ ಹೆಚ್ಚಾಗಿ ದೋಣಿಯು ಮುಳಗಿತು. ನೀರಲ್ಲಿ ಬಿದ್ದವರಲ್ಲಿ ಕೆಲವರ ಮಾತ್ರ ಈಜಿ ದಡವನ್ನು ಸೇರಿಕೊಂಡರು. ಈಜು ಬಾರದವರು ಜೋರಾಗಿ ಕೂಗಿಕೊಂಡರು. ದಡದಲ್ಲಿದ್ದ ಜನರು ನೀರಲ್ಲಿ ಬಿದ್ದವರನ್ನು ರಕ್ಷಿಸಿದರು. ಹಾವಾಡಿಗ ತನ್ನ ಮಗ ಬಾರದೇ ಇರುವುದನ್ನು ನೋಡಿ ನನ್ನ ಮಗ ಎಲ್ಲಿ ಎಂದು ಸುತ್ತಲೂ ನೋಡಿದನು. ಕೈಕಾಲು ಕಟ್ಟಿದ್ದ ಅವನನ್ನು ರಕ್ಷಿಸುವುದು ದೋಣಿಯಲ್ಲಿದ್ದ ಯಾರಿಗೂ ಬೇಡವಾಗಿತ್ತು.

ಆದರೆ ಅವನನ್ನು ಗಮನಿಸಿದ ಈಜುಗಾರನೊಬ್ಬ ಪಾಪ ಎಂದು ಕರುಣೆಯಿಂದ ದಡಕ್ಕೆ ಕರೆದು ತಂದು ಅವನ ಪ್ರಾಣವನ್ನು ಉಳಿಸಿದ. ಎಲ್ಲರೂ ಕೂಡ ತಮ್ಮ ತಮ್ಮ ಊರಿಗೆ ತೆರಳಿದರು. ಇತ್ತ ಹಾವಾಡಿಗ ಮತ್ತು ಅವನ ಮಗ ಮಾತ್ರ ಅಲ್ಲೇ ಉಳಿದರು. ಮಗನನ್ನು ಉದ್ದೇಶಿಸಿ ಹಾವಡಿಗ ತನ್ನ ಮಗನಿಗೆ ಹೀಗೆ ಹೇಳಿದ. 'ನಿನ್ನ ತುಂಟತನದಿಂದಾಗಿ ಎಷ್ಟೊಂದು ಜನರಿಗೆ ಅಪಾಯ ಬಂದಾಗಿತ್ತು ನೋಡು' ಎಂದು ಅಳುತ್ತ ತನ್ನ ಮಗನಿಗೆ ಹೇಳಿದನು. 'ಸಾವಿನ ದವಡೆಯಲ್ಲಿದ್ದ ನಿನ್ನನ್ನು ಮತ್ಯಾರ ಉಳಿಸಬೇಕಾಗಿತ್ತು ನೋಡು. ಇವತ್ತಿನಿಂದಾದರೂ ತುಂಟತನ ಮಾಡದೆ ಮತ್ತೊಬ್ಬರಿಗೆ ಸಹಾಯ ಮಾಡುವುದನ್ನು ಕಲಿ' ಎಂದು ತನ್ನ ಮಗನಿಗೆ ತಿಳಿವಳಿಕೆ ಹೇಳಿದನು. ಅಂದಿನಿಂದ ಹಾವಾಡಿಗನ ಮಗ ತುಂಟತನವನ್ನು ಬಿಟ್ಟು ಎಲ್ಲರಿಗೂ ಸಹಾಯ ಮಾಡತೊಡಗಿದ ಮತ್ತು ಒಳ್ಳೆಯ ಹುಡುಗನೆಂಬ ಹೆಸರು ಪಡೆದ.

**– ಸಂತೋಷ. ಕೆ.ಎಸ್. 9ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ಲೇಖನಿ ಖಡ್ಗಕ್ಕಿಂತ ಹರಿತವಾದುದು ಎಂಬಂತೆ ಮಾತು ಖಡ್ಗಕ್ಕಿಂತ ಹರಿತವಾದ ಅಸ್ತ್ರವಾಗಿದೆ

# ನುಡಿದಂತೆ ನಡೆದರೆ ಸಮಾಜಕ್ಕೆ ಒಳಿತು

ನಡೆ–ನುಡಿ ಒಂದಾಗಿರಬೇಕು ಎನ್ನುವುದು ಇಂದು ನಡೆಯಲ್ಲಿ ನುಡಿ, ನುಡಿಯಲ್ಲಿ ನಡೆ ಇರದಿದ್ದರೂ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬಂತಾಗಿದೆ. ಲೇಖನಿ ಖಡ್ಗಕ್ಕಿಂತ ಹರಿತವಾದುದು ಎಂಬಂತೆ 'ಮಾತು ಖಡ್ಗಕ್ಕಿಂತ ಹರಿತವಾದ ಅಸ್ತ್ರವಾಗಿದೆ'. ಇಂದು ಜೀವನ, ಜಗತ್ತು ಮಾತಿನ ಮೇಲೆಯೇ ನಡೆಯುತ್ತಿದೆ. ಬಹುತೇಕ ಜನರಿಗೆ ಮಾತೇ ಬಂಡವಾಳ. ಮಂತ್ರದಿಂದ ಮಾವಿನ ಕಾಯಿ ಉದುರುವುದೇ? ಎನ್ನುವ ಪ್ರಶ್ನೆಗೆ ಮಾತಿಗೆ ಮರುಳಾಗದವರಿಲ್ಲ. ಮಾತಿನಿಂದ ಜಗತ್ತನ್ನೇ ಗೆಲ್ಲಬಹುದು. ಅಧಿಕಾರ, ಅಂತಸ್ತು ಪಡೆಯಬಹುದೆಂದು ಸಾಬೀತಾಗಿದೆ. ಒಂದನಾಡದೆ ಹನ್ನೊಂದಾಡುವ ಹವ್ಯಾಸ, ಎಲ್ಲದರಲ್ಲಿ ಗತ್ತು–ಗತ್ತುಗಾರಿಕೆ ಕಬಳಿಸುವಿಕೆ ಹೇಳುವುದೊಂದು, ಮಾಡುವುದು ಮತ್ತೊಂದು ನಿರಂತರವಾಗಿ ನಡೆದೇ ಇದೆ. ಸಮಾಜದಲ್ಲಿ ನಾಟಕೀಯತೆ ಬೃಹದಾಕಾರವಾಗಿ ಬೆಳೆದು ನಿಂತಿದೆ. ಯಾವುದನ್ನು ನಂಬಬೇಕು ಯಾವುದನ್ನು ಬಿಡಬೇಕು ಎಂಬ ಗೊಂದಲ ಪದೇ ಪದೇ ಎದುರಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ನಡೆ–ನುಡಿಯೊಳಗೆ ಎದ್ದಿರುವ ಗೊಂದಲ. ಮಾತಿನ ಮೇಲೆ ಹಿಡಿತವಿಲ್ಲ. ಶುಚಿತ್ವವಿಲ್ಲ ಜವಾಬ್ದಾರಿ ಇಲ್ಲ. ಮಾತಿನ ಮೇಲೆ ನಿಲ್ಲುವವರಿಲ್ಲ. ಸರಿಯಾಗಿ ಇತರರೊಡನೆ ಮಾತನಾಡದಷ್ಟು ಮುದುರಿಕೊಂಡಿದ್ದಾರೆ. ಸಮಾಜದಲ್ಲಿ ಮತ್ತು ಬದುಕಿನಲ್ಲಿ ಶಾಂತಿ ನೆಮ್ಮದಿ, ಸುಖ, ಸಮೃದ್ಧಿ ದೊರೆಯುವಂತೆ ಮಾಡಲು 12ನೇ ಶತಮಾನದಲ್ಲಿ ಬಸವೇಶ್ವರರು ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದರು. ಅದರಂತೆ ನಡೆ–ನುಡಿ ಬೆಳೆಸಿಕೊಂಡರು. ಅವರ ಒಂದೊಂದು ವಚನ ಮಾನವ ಪ್ರೀತಿಯ ಪ್ರತೀಕವಾಗಿರುವಂತೆ ನಡೆಯೊಳಗೆ ಏಕತೆ ಸಾಧಿಸಲು ಪ್ರೇರಕ ಶಕ್ತಿಯಾಗಿವೆ. ಅಷ್ಟೇ ಅಲ್ಲ ಒಲ್ಲದ ಮಾತಿನಿಂದ ತೆರೆಗೆಲೆಯಂತಾಗಿರುವ ಬದುಕಿಗೆ ಪ್ರೇರಣೆ ನೀಡುತ್ತವೆ. ನುಡಿಗೆ ನಡೆಯಾಗಿ ಉಳಿದಿವೆ



## ವಚನೋತ್ಸಾಹ



ರೇಖಾ ಪಾಟೀಲ
ಲೇಖಕಿ, ರಾಯಚೂರು

Scan For Digital Colourful
HAMPI TIMES E-paper

"ತನುಶುದ್ಧ ಮನಶುದ್ಧ ಭಾವ ಶುದ್ಧವಾದವರ ಎನಗೊಮ್ಮೆ ತೋರಾ ನಡೆಯಲ್ಲ ಸದಾಚಾರ, ನುಡಿಯೆಲ್ಲ ಶಿವಾಗಮ ನಿತ್ಯಶುದ್ಧವಾದವರ, ಎನಗೊಮ್ಮೆ ತೋರಾ ನಿಜಶರಣರ ಎನಗೊಮ್ಮೆ ತೋರಾ ಚೆನ್ನಮಲ್ಲಿಕಾರ್ಜುನ" ನುಡಿಯುವುದು ವಚನ ಕೊಡುವುದು ಪ್ರಮಾಣ ಮಾಡುವುದು ಬಲು ಸುಲಭ ಆದರೆ ಅದನ್ನು ಈಡೇರಿಸುವುದು ತಪಸ್ಸಿನಷ್ಟೇ ಕಷ್ಟ. ಆದ್ದರಿಂದ ವಚನ ಕೊಡುವಾಗ ಹೃದಯದಿಂದ ಭಾವಿಸಿ ವಿವೇಕದಿಂದ ಯೋಚಿಸಿ ಕೊಡಬೇಕು. ಈಡೇರಿಸಬೇಕು. ಅಂತಹ ಸವಾಲನ್ನು ಮನಗಂಡ ಅಕ್ಕಮಹಾದೇವಿ ನಿತ್ಯ ಶುದ್ಧವಾದವರ ಎನಗೊಮ್ಮೆ ತೋರಾ ಎಂದು ಸವಾಲು ಹಾಕಿದ್ದಾಳೆ.

ಇಂತಹ ಅಕ್ಕ ಬಸವಣ್ಣನನ್ನು ಕಲ್ಯಾಣದಲ್ಲಿ ಕಂಡ ಮೇಲೆ ಆತನ ನಡೆ–ನುಡಿ ಒಂದಾದ ಪರಿಯನ್ನು ಮೆಚ್ಚಿ ತನ್ನ ತಂದೆ ಬಸವಣ್ಣ ಎಂದು ಕೊಂಡಾಡಿದ್ದಾಳೆ.

"ಅಂಗದಲ್ಲಿ ಆಚಾರವ ತೋರಿದ:
ಆ ಆಚಾರವೇ ಲಿಂಗವೆಂದರುಹಿದ.
ಪ್ರಾಣದಲ್ಲಿ ಅರಿವ ನೆಲೆಗೊಳಿಸಿದ:
ಆ ಅರಿವೇ ಜಂಗಮವೆಂದು ತೋರಿದ.
ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನ ಬಸವಣ್ಣನು
ಏನಗೀ ಕ್ರಮವನರುಹಿದನಯ್ಯ ಪ್ರಭುವೇ."

ಇಷ್ಟಲಿಂಗ ಸಂಬಂಧವಾದ ಆಚಾರಗಳಿಂದ ಕಾಯವನ್ನೇ ಕೈಲಾಸ ಮಾಡಿಕೊಳ್ಳಬಹುದು. ಎಂದು ಅಕ್ಕಮಹಾದೇವಿ ಈ ವಚನದಲ್ಲಿ ಹೇಳಿದ್ದಾಳೆ.

"ಎನ್ನ ನಡೆಯೊಂದು ಪರಿ
ಎನ್ನ ನುಡಿಯೊಂದು ಪರಿ
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ.
ನುಡಿಗೆತಕ್ಕನಡೆಯಕಂಡಡೆಕೂಡಲಸಂಗಮದೇವನೊಳಗಿಪ್ಪನಯ್ಯಾ"

ಎಂದು ಬಸವಣ್ಣನವರು ತಮ್ಮ ಅಂತರಂಗವನ್ನು ಬಹಿರಂಗಗೊಳಿಸಿ ನಡೆ–ನುಡಿ ಕತ್ತಿಯ ಮೇಲಿನ ನಡಿಗೆ ಎಂದು ನಿರೂಪಿಸಿದ್ದಾರೆ.

"ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿದ್ದ ಲಿಂಗವು ಘಟಸರ್ಪನಯ್ಯಾ. ನುಡಿಯಲುಬಾರದು
ನಡೆಯಲುಬಾರದು
ಲಿಂಗದೇವನೆ ದಿಬ್ಯವೋ ಅಯ್ಯಾ
ಬಡವನ ಕೋಪವು ಅವುಡಿಗೆ ಮೃತ್ಯುವಾದಂತೆ
ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ."

ಬಸವಣ್ಣನವರು ನುಡಿ ಒಳಗಾಗಿ ನಡೆಯದಿದ್ದರೆ ಕೂಡಲಸಂಗಮ ದೇವನೆಂತೊಲಿವನಯ್ಯ ಎಂದು ಪ್ರಶ್ನಿಸಿದರು. ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರುದ ಲಿಂಗ ಘಟಸರ್ಪವಯ್ಯ ಎಂದು ಸ್ಪಷ್ಟಪಡಿಸಿದರು. "ಭಕ್ತಿ ಸುಭಾಷೆಯ ನುಡಿಯ ನುಡಿವೆ ನುಡಿದಂತೆ ನಡೆವೆ"ಎಂದು ಹೇಳುವ ಮೂಲಕ ನಡೆ–ನುಡಿ ಸಿದ್ಧಾಂತವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ದಾರಿಯನ್ನು ತೋರಿದ್ದಾರೆ.

"ಆದ್ಯರ ವಚನ ಪರುಷ ಕಂಡಯ್ಯ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲಸಂಗಮ ಶರಣರ ವಚನ ಬೇವ ಸವಿದಂತೆ "

ಬೇವು ಕಹಿಯಾದರೂ ಆರೋಗ್ಯಕ್ಕೆ ಅಮೃತ. ಹಾಗಾಗಿ ನಡೆ ಕಷ್ಟವಾದರೂ ಅದು ಮುಂದೆ ನಮ್ಮ ಜೀವನಕ್ಕೆ ಸಂತೃಪ್ತಿ ಸಮೃದ್ಧಿ ತರುತ್ತದೆ.

"ಆನೆಯನೇರಿಕೊಂಡು ಹೋದಿರೇ ನೀವು
ಕುದುರೆನೇರಿಕೊಂಡು ಹೋದಿರೇ ನೀವು
ಕುಂಕುಮ ಕಸ್ತೂರಿಯ ಹೂಸಿಕೊಂಡು ಹೋದಿರೇ ಅಣ್ಣಾ
ಸತ್ಯದ ನಿಲವನರಿಯದೆ ಹೋದಿರಲ್ಲಾ
ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಸದಮದ ಗೆಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಕೂಡಲಸಂಗಮದೇವ ನರಿಯದೆ
ನರಕಕ್ಕೆ ಭಾಜನವಾದಿರಲ್ಲಾ"

ಇತ್ತೀಚಿನ ದಶಕಗಳಲ್ಲಿ ಎಲ್ಲವೂ ನಾನು ನನ್ನಿಂದಲೇ ಎಂದು ಪ್ರದರ್ಶಿಸಲು ಸಿರಿ ಸಂಪತ್ತಿನ ಬೆನ್ನತ್ತಿ ಆಡಂಬರ ಜೀವನ, ಅದ್ದೂರಿ ಮನೆ, ಮದುವೆ, ಐಶಾರಾಮಿ ವಸ್ತುಗಳಿಗೆ ಮನಸೋತು ಮನಶಾಂತಿ, ಆರೋಗ್ಯ ನೆಮ್ಮದಿ, ಕೆಡಿಸಿಕೊಂಡು ನೈತಿಕ ಪ್ರಜ್ಞೆಯನ್ನು ಕಳೆದುಕೊಂಡು ಜೀವನ ಮತ್ತು ಸುತ್ತಲಿನ ಪರಿಸರವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ನಾನು ಎಂಬ ಅಹಂಕಾರದಲ್ಲಿ ಮದಗಜವೇರಿದ ನಾವು ಸತ್ಯದ ನಿಲುವಿನಿಂದ ಸದ್ಗುಣದ ಫಲವ ಬಿತ್ತಿ ಬೆಳೆದವರು ಎನ್ನುವುದನ್ನು ಈ ವಚನದ ಮೂಲಕ ಬಸವಣ್ಣನವರು ತಿಳಿಸಿದ್ದಾರೆ.

ಹೀಗೆ ಸಮಾಜ ಸುಧಾರಕರು, ದಾರ್ಶನಿಕರು, ಸಂತರು ನಿರ್ಭಯದಿಂದ ಲೋಕದ ಅಭಿವೃದ್ಧಿಗಾಗಿ ಅಂದು ಇಂದು ಎಂದೆಂದಿಗೂ ಬದುಕಿ ಬಾಳಿದವರು ಇಂದು ಅವರ ತತ್ವಗಳು ನಮ್ಮೊಂದಿಗೆ ಇಂತಹ ದೊಡ್ಡ ವ್ಯಕ್ತಿತ್ವದ ವ್ಯಕ್ತಿಗಳಿಗಾಗಿ ಅವರ ಋಣ ತೀರಿಸಲು ನಡೆ–ನುಡಿ ಒಂದಾಗುವುದು ಅತ್ಯಗತ್ಯ. ಅನಿವಾರ್ಯ. ಇಲ್ಲವೆಂದರೆ ಮಾನಸಿಕ ನರಕ ಕೋರ್ಟು, ಜಗಳ, ಸ್ವಹಿಂಸೆ, ಇವೆಲ್ಲ ಅನಿವಾರ್ಯ. ಅಂತಿಮವಾಗಿ ಆಯ್ಕೆ ಅವರವರಿಗೆ ಬಿಟ್ಟಿದ್ದು.

# ಚಳಿಗಾಲದಲ್ಲಿ ಆರೋಗ್ಯ ಸಂರಕ್ಷಣೆ

ಶಿಶಿರ ಋತುವಿನ ಆಗಮನದೊಂದಿಗೆ ಚಳಿಗಾಲ ಶುರುವಾಗುತ್ತದೆ. ಚುಮುಚುಮು ಚಳಿಯೊಂದಿಗೆ ಬಿಸಿ ಬಿಸಿ ಕಾಫಿಯನ್ನು ಹೀರಲು ಬಹಳ ಹಿತವೆನಿಸುತ್ತದೆ. ಕೆಲವರು ಚಳಿಯನ್ನು ಆಸ್ವಾದಿಸಲು ಊಟಿ ಕೊಡೈಕೆನಾಲ್, ಚಿಕ್ಕಮಗಳೂರು ಅಂತಹ ಹಿಲ್ ಸ್ಟೇಷನ್ ಪ್ರದೇಶಗಳಿಗೆ ಪ್ರವಾಸ ಹೋಗುತ್ತಾರೆ. ಚಳಿಗಾಲದಲ್ಲಿ ಮುಂಜಾನೆಯ ಮಂಜು ಆಕಾಶಕ್ಕೆ ಹಾಗೂ ಭೂಮಿಗೆ ಸೇತುವೆಯ ರೀತಿ ಬೆಸೆದಿರುತ್ತದೆ. ಚಳಿಗಾಲದಲ್ಲಿ ಪ್ರಕೃತಿಯ ಸೌಂದರ್ಯ ದುಪ್ಪಟ್ಟಾಗಿರುತ್ತದೆ.

ಚಳಿಗಾಲದಲ್ಲಿ ಸೂಕ್ಷ್ಮಾಣು ಜೀವಿಗಳು ವೇಗವಾಗಿ ಬೆಳೆಯುತ್ತವೆ. ಹಾಗಾಗಿ ನಾವು ರೋಗನಿರೋಧಕ ಶಕ್ತಿ ಹೆಚ್ಚಿರುವ ಆಹಾರವನ್ನು ಸೇವಿಸಬೇಕು. ವಾತಾವರಣದ ತಾಪಮಾನ ಕಡಿಮೆಯಾಗಿ ನಮ್ಮ ದೇಹದ ತಾಪಮಾನವೂ ಕಡಿಮೆಯಾಗುತ್ತದೆ. ದೇಹವು ಜೀರ್ಣಾಂಗ ಕ್ರಿಯೆಯ ಮೂಲಕ ತನ್ನ ಉಷ್ಣಾಂಶವನ್ನು ಹೆಚ್ಚಿಸಿಕೊಳ್ಳುತ್ತದೆ. ಆದ್ದರಿಂದ ಈ ಸಮಯದಲ್ಲಿ ಹಸಿವು ಹೆಚ್ಚಾಗುತ್ತದೆ. ಬಿಸಿಬಿಸಿ ಆಹಾರವನ್ನು ಸೇವಿಸಬೇಕು ಹಾಗೂ ಕರಿದ ಪದಾರ್ಥವನ್ನು ತಿನ್ನಬೇಕು ಎಂದು ಎನಿಸುತ್ತದೆ. ಕರಿದ ಪದಾರ್ಥಗಳನ್ನು ತಿನ್ನುವುದ ರಿಂದ ಜೀರ್ಣಕ್ರಿಯೆಗೆ ತೊಂದರೆ ಯಾಗುತ್ತದೆ. ಹಾಗಾಗಿ ಈ ಋತುಮಾನದಲ್ಲಿ ಸಿಗುವ ಹಣ್ಣು ಮತ್ತು ತರಕಾರಿಗಳನ್ನು ಸೇವಿಸುವುದು ಉತ್ತಮ.

ಬ್ರೊಕೋಲಿ, ಬೀಟ್ರೂಟ್ ಆಲೂಗೆಡ್ಡೆ, ಕ್ಯಾರೆಟ್ ನಂತಹ ಬೇರು ತರಕಾರಿಗಳನ್ನು ನಾರುಯುಕ್ತ ಪದಾರ್ಥಗಳನ್ನು ಪಾಲಕ್ ಸೊಪ್ಪು, ಕಡಲೆಕಾಯಿ ಬಾದಾಮಿ, ಗೋಡಂಬಿ ಪಿಸ್ತಾ ಗಳನ್ನು ಸೇವಿಸುವುದರಿಂದ ಚಯಾಪಚಾಯ ಕ್ರಿಯೆ ವೇಗವಾಗುತ್ತದೆ. ಅಲ್ಲದೆ ಇವು ನಮ್ಮ ದೇಹದ ಉಷ್ಣಾಂಶವನ್ನು ಹೆಚ್ಚಿಸುತ್ತದೆ.

ಪಪ್ಪಾಯ, ಕಿವಿ, ಸೀಬೆ, ಕಿತ್ತಳೆ ದಾಳಿಂಬೆ ಹಣ್ಣುಗಳು ಚಳಿಗಾಲಕ್ಕೆ ಅತ್ಯುತ್ತಮವಾಗಿರುತ್ತದೆ. ಈ ಸಮಯದಲ್ಲಿ ಸೇವಿಸುವುದರಿಂದ ದೇಹಕ್ಕೆ ಬೇಕಾಗುವ ವಿಟಮಿನ್ ಸಿ ಸಿಗುತ್ತದೆ. ಕಿತ್ತಳೆ ಹಣ್ಣು ಶೀತವಾದರೆ ಅದರ ಬದಲಾಗಿ ಮೂಸಂಬಿ ಹಣ್ಣಿನ ಉಪಯೋಗ ಒಳ್ಳೆಯದು. ಸೀಬೆ ಹಣ್ಣಿಗೆ ಉಪ್ಪು ಮತ್ತು ಕಾಳು ಮೆಣಸಿನ ಪುಡಿಯನ್ನು ಉದುರಿಸಿ ತಿನ್ನುವುದರಿಂದ ಕಫ ಹಾಗೂ ನೆಗಡಿ ಆಗುವುದಿಲ್ಲ.

ಚಳಿಗಾಲದ ಸಮಯದಲ್ಲಿ ಅಡುಗೆಯಲ್ಲಿ ಶುಂಠಿ, ಬೆಳ್ಳುಳ್ಳಿ, ಪುದೀನ, ದೊಡ್ಡಪತ್ರೆ, ತುಳಸಿ ಒಂದಲಗ,ಅಮೃತಬಳ್ಳಿಯನ್ನುಬಳಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ.

ಪ್ರತಿದಿನ ಕಷಾಯ ಕುಡಿಯುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಆಗ ನೆಗಡಿ ವಾತದಿಂದ ನಮ್ಮ ದೇಹವನ್ನು ನಾವು ಕಾಪಾಡಿಕೊಳ್ಳಬಹುದು. ಕಷಾಯಕ್ಕೆ ಕಾಳು ಮೆಣಸು, ಅರಿಶಿನ, ಶುಂಠಿ, ಚಕ್ಕೆ ,ಲವಂಗ ಏಲಕ್ಕಿ ಮುಂತಾದ ಪದಾರ್ಥಗಳನ್ನು ಬಳಸಬೇಕು.

ಚಳಿಗಾಲದಲ್ಲಿ ಕಾಯಿಸಿ ಆರಿಸಿದ ನೀರನ್ನು ಸೇವಿಸಬೇಕು ಇದರಿಂದ ಗಂಟಲಿಗೂ ಹಿತವಾಗುತ್ತದೆ. ಚಿಕ್ಕ ಮಕ್ಕಳಿಗೆ ಈ ಸಮಯದಲ್ಲಿ ದೊಡ್ಡಪತ್ರೆ ರಸವನ್ನು ಜೇನುತುಪ್ಪದೊಂದಿಗೆ ಬೆರೆಸಿ ಕೊಡುವುದರಿಂದ, ಹಿಪ್ಪಲಿ ಜ್ಯೇಷ್ಠ ಮಧು ಜಾಯಿಕಾಯಿಯನ್ನು ವಾರಕ್ಕೆ ಒಮ್ಮೆ ತೇದಿ ಉಗುರು ಬೆಚ್ಚಗಿನ ನೀರಿನೊಂದಿಗೆ ಸೇರಿಸಿ ಕುಡಿಸುವುದರಿಂದ ನೆಗಡಿ ಕಫದಿಂದ ಮಕ್ಕಳ ಆರೋಗ್ಯವನ್ನು ಕಾಪಾಡಬಹುದು.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ಹೊರಗಿನ ಆಹಾರ, ಫ್ರಿಡ್ಜ್ ನಲ್ಲಿ ಇಟ್ಟ ಆಹಾರವನ್ನು ತಿನ್ನುವುದನ್ನು ಆದಷ್ಟು ಕಡಿಮೆ ಮಾಡಬೇಕು . ಆಹಾರದಲ್ಲಿ ಹಾಲು ತುಪ್ಪದ ಬಳಕೆಯನ್ನು ಮಿತ ಪ್ರಮಾಣದಲ್ಲಿ ಸೇವಿಸಬೇಕು. ಆಗ ದೇಹಕ್ಕೆ ಒಳ್ಳೆಯ ಕೊಬ್ಬಿನಂಶ ಸಂಚಯವಾಗುತ್ತದೆ.



ಚಳಿಗಾಲದಲ್ಲಿ ಶುಷ್ಕ ವಾತಾವರಣ ಇರುವುದರಿಂದ ದೇಹದಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತದೆ ಹಾಗಾಗಿ ಹೆಚ್ಚು ನೀರು ಕುಡಿಯಬೇಕು.

ಶುಷ್ಕ ವಾತಾವರಣದ ಸಲುವಾಗಿ ಕೈ ಮೈಗಳ ಚರ್ಮವು ಚರ್ಮವು ಒಡೆಯುವುದು ಸಾಮಾನ್ಯ. ಇದಕ್ಕೆ ಪರಿಹಾರವೆಂದರೆ ಕೊಬ್ಬರಿ ಎಣ್ಣೆಯ ಉಪಯೋಗ. ಕೊಬ್ಬರಿ ಎಣ್ಣೆಯನ್ನು ಕೈಮೈಗಳಿಗೆ ಲಘುವಾಗಿ ಲೇಪಿಸುವುದರಿಂದ ಒಣ ಚರ್ಮದ ಸಮಸ್ಯೆಯಿಂದ ಪಾರಾಗಬಹುದು. ವಾರಕ್ಕೊಮ್ಮೆ ತಲೆಗೆ ಹರಳೆಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ದೇಹದ ಉಷ್ಣತೆ ನಿಯಂತ್ರಣದಲ್ಲಿರುತ್ತದೆ. ಸ್ನಾನ ಮಾಡುವಾಗ ಬೆಚ್ಚಗಿನ ನೀರು ಉತ್ತಮ ಅದರಲ್ಲಿ ಎರಡು ಹನಿ ಕೊಬ್ಬರಿ ಎಣ್ಣೆಯನ್ನು ಹಾಕಿ ಸ್ನಾನ ಮಾಡುವುದರಿಂದ ಒಣ ಚರ್ಮದ ಸಮಸ್ಯೆಯಿಂದ ಪಾರಾಗಬಹುದು.

ಚಳಿಗಾಲದಲ್ಲಿ ಒಣ ಚರ್ಮದಿಂದಾಗಿ ಮೈ ಕೈ ಎಲ್ಲಾ ತುರಿಕೆಯಾಗುವುದು ಸಹಜ ತುಟಿಗಳು ಕಾಲಿನ ಹಿಮ್ಮಡಿ ಒಡೆಯುತ್ತವೆ. ತೆಂಗಿನ ಎಣ್ಣೆಯಿಂದ ಮಸಾಜ್ ಮಾಡುವುದರಿಂದ ಚರ್ಮದ ಮೇಲೆ ಮಾಯ್ಶ್ಚರೈಸರ್ ಆಗಿ ಕೆಲಸ ಮಾಡುತ್ತದೆ. ಜೇನುತುಪ್ಪವನ್ನು ಕೈಕಾಲುಗಳಿಗೆ ಹಚ್ಚಿ ಐದು ನಿಮಿಷಗಳವರೆಗೆ ಮಸಾಜ್ ಮಾಡಿಕೊಳ್ಳುವುದರಿಂದಲೂ ಚರ್ಮವು ತೇವವಾಗಿದ್ದು ಒಣ ಚರ್ಮದಿಂದ ಮುಕ್ತಿ ಸಿಗುತ್ತದೆ .ಚಳಿಗಾಲದಲ್ಲಿ ಚರ್ಮಕ್ಕೆ ಬಾದಾಮಿ ಎಣ್ಣೆಯನ್ನು ಉಪಯೋಗಿಸಬೇಕು ಇದರಲ್ಲಿ ವಿಟಮಿನ್ ಇ ಹೇರಳವಾಗಿದೆ. ಇದು ಚರ್ಮಕ್ಕೆ ಹೊಳಪನ್ನು ನೀಡುತ್ತದೆ. ಪೆಟ್ರೋಲಿಯಂ ಜೆಲ್ಲಿ ಬಳಸುವುದರಿಂದ ಚರ್ಮ ಒಣಗುವುದನ್ನು ತಡೆಗಟ್ಟಬಹುದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಶಿಕ್ಷಣ

ಎಲ್ಲರಿಗೂ ದೊರೆಯಲಿ ಸುಶಿಕ್ಷಣ
ದೀನದಲಿತರಿಗೆ ಮಾಡುವ ಆರಕ್ಷಣ
ಸಹಬಾಳ್ವೆಯಿಂದ ಬದುಕೋಣ ಪ್ರತಿಕ್ಷಣ
ಸಮರಸವೇ ಸಮಾಜದ ಗುಣಲಕ್ಷಣ

ಶಿಕ್ಷಣದಿಂದಲೇ ಪ್ರಗತಿಯು ಸಾಧ್ಯ
ಆತ್ಮೋನ್ನತಿಗೆ ಜ್ಞಾನವೇ ವೇದ್ಯ
ಶಿಕ್ಷಿತ ಸಮಾಜವೇ ನಮ್ಮಯ ಆದ್ಯ
ಶಿಕ್ಷಣ ತರುವುದು ಬಯಸಿದ ಭಾಗ್ಯ

ಸುಶಿಕ್ಷಣದಿಂದಲೇ ಸುವಿಚಾರಕ್ಕೆ ಬಲವು
ಸೃಜನಶೀಲತೆಯು ತರುವುದು ಗೆಲುವು
ಹರಡುತ ಎಲ್ಲೆಡೆ ಪರಸ್ಪರ ಒಲವು
ತಳೆಯುವ ಸಮಗ್ರ ಅಭಿವೃದ್ಧಿಯ ನಿಲುವು

– ಚೇತನ ಭಾರ್ಗವ, ಬೆಂಗಳೂರು

### ಮುದ್ದಿನ ಬೆಕ್ಕು

ಮಿಯಾವ್ ಮಿಯಾವ್ ಎನ್ನುತಾ ನಾನು
ಓಡಿ ಬರುವೆನು ಅಡುಗೆ ಕೋಣೆಯ ಕಡೆಗೆ
ಯಜಮಾನಿಯು ಕೊಡುವ ತಿಂಡಿ ತಿನಿಸನು
ತಿಂದು ನಡೆಯುವೆನು ನಾ ಇಲಿಯ ಬೇಟೆಗೆ

ಸೌದೆಯ ಒಲೆಯಲ್ಲಿ ಅನ್ನವು ಬೇಯುತಿರಲು
ಓಡಿ ಬಂದೆನು ನಾನು ಗಂಜಿಯ ಸುವಾಸನೆಗೆ
ಹಸಿವು ತಾಳಲಾರದೆ ಹೊಟ್ಟೆ ತಾಳ
ಹಾಕುತಿರಲು
ಹುಡುಕಿಬಿಡಲೇ ಹಪ್ಪಳ ಸಂಡಿಗೆ ಡಬ್ಬಿಯ
ಮೆಲ್ಲಗೆ?!

ತಟ್ಟೆಗೆ ಅನ್ನ, ಮೊಸರು, ಹಾಲನು
ಹಾಕಿಕೊಟ್ಟರೆ
ಹಸಿವಾದಾಗ ಉಣ್ಣುವೆನು ನಾ ಬಲು
ಖುಷಿಯಲ್ಲಿ
ಸುಸ್ತಾದಾಗ ಮಲಗಲು ಒಂದಿಷ್ಟು ಜಾಗ
ಸಿಕ್ಕರೆ
ಹಾಯಾಗಿ ನಿದ್ದೆಗೆ ಜಾರಿ ಬಿಡುವೆನು
ನಿಶ್ಚಿಂತೆಯಲ್ಲಿ

ಮನೆಯ ಮುದ್ದಿನ ಬೆಕ್ಕು ನಾ ಬೆಳ್ಳಿ ನನ್ನ
ಹೆಸರು
ಬಿಳಿಯ ಕೊರಳಿನಲ್ಲೊಂದು ಪಟ್ಟಿ
ಹಾಕಿರುವೆನು
ಪುಟಾಣಿಗಳು ಕಂಡರೆ ನನ್ನ ಹಿಡಿದು
ಅಪ್ಪುವರು
ಗೋಲಿ ಕಣ್ಣ ಹೊರಳಿಸಿ ಒಡತಿಗೆ
ಕಾಯುತಿರುವೆನು.

– ಪ್ರಜ್ಞಾ ರವೀಶ್ ಕುಳಮರ್ವ
ಕಾಸರಗೋಡು

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**05–12–2024 – ಗುರುವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ವೃದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:55:33 |
| ಸೂರ್ಯಾಸ್ತ | : 17:39:49 |
| ರಾಹು ಕಾಲ | : 13:38–14:59 |
| ಯಮಘಂಡ ಕಾಲ | : 06:56–08:16 |
| ಗುಳಿಕ ಕಾಲ | : 09:37–10:57 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 04–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.61 ಅಡಿ |
| ಒಳ ಹರಿವು | 3246 ಕ್ಯುಸೆಕ್ |
| ಹೊರ ಹರಿವು | 3310 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.610 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1592.49 ಅಡಿ |
| ಒಳ ಹರಿವು | 853 ಕ್ಯುಸೆಕ್ |
| ಹೊರ ಹರಿವು | 1958 ಕ್ಯುಸೆಕ್ |
| ಸಾಮರ್ಥ್ಯ | 13.238 ಟಿಎಂಸಿ |

ನ್ಯಾಯಾಂಗದ ಎಲ್ಲಾ ಬೇಡಿಕೆಗಳ ಅನುಷ್ಠಾನಕ್ಕೆ ಬದ್ಧ ಎಂದ ಶಾಸಕ ಎನ್.ಟಿ.ಶ್ರೀನಿವಾಸ

# ವಕೀಲರ ಭವನ ನಿರ್ಮಾಣಕ್ಕೆ 2 ಕೋಟಿ ರೂ

■ ಹಂಪಿ ಟೈಮ್ಸ್ ಕೂಡ್ಲಿಗಿ

ಸಮಾಜದಲ್ಲಿ ನೊಂದವರಿಗೆ ನ್ಯಾಯ ಒದಗಿಸುವ ಬಹುಮುಖ್ಯ ಅಂಗವಾದ ನ್ಯಾಯಾಂಗದ ಎಲ್ಲಾ ಬೇಡಿಕೆಗಳ ಅನುಷ್ಠಾನಕ್ಕೆ ನಾನು ಬದ್ಧ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಬುಧವಾರ ವಕೀಲರ ಭವನಕ್ಕೆ ಭೂಮಿಪೂಜೆಯಲ್ಲಿ ಭಾಗಿಯಾಗಿ ಮಾತನಾಡಿದರು. ನ್ಯಾಯಾಲಯ ಕೂಡ್ಲಿಗಿಯಲ್ಲಿ ಸ್ಥಾಪನೆಯಾಗಿ ಐದು ದಶಕಗಳು ಕಳೆದರು ಇಲ್ಲಿನ ವಕೀಲರಿಗೆ ಭವನ ಇಲ್ಲದಿರುವುದು ಮನಗಂಡು ಅಂದಾಜು 2 ಕೋಟಿಗೂ ಹೆಚ್ಚು ಅನುದಾನ ನೀಡಿ ಸುಸಜ್ಜಿತ ವಕೀಲರ ಭವನ ನಿರ್ಮಾಣಕ್ಕೆ ಅನುದಾನ ಸರ್ಕಾರ ಒದಗಿಸಿದೆ. ಇನ್ನೂ ಹೆಚ್ಚುವರಿ ಅನುದಾನ ಬೇಕಾದಲ್ಲಿ, ಸಂಭಂದಿಸಿದ ಸಚಿವರ ಮನವೊಲಿಸಿ ಅವಶ್ಯ ಅನುದಾನ ಒದಗಿಸಲಾಗುವುದು ಎಂದು ಭರವಸೆ ನೀಡಿದರು. ನ್ಯಾಯಾಂಗ ಸಮಾಜದಲ್ಲಿ ತನ್ನದೇ ಆದ ಘನತೆಯನ್ನು ಹೊಂದಿದ್ದು, ಅದಕ್ಕೆ ಪೂರಕವಾಗಿ ಬೇಕಾದ ಸೌಲಭ್ಯಗಳನ್ನು ಒದಗಿಸಲು ಸದಾ ಸಿದ್ದ ಎಂದು ತಿಳಿಸಿದರು.



ಹಿರಿಯ ಸಿವಿಲ್ ನ್ಯಾಯಾಧೀಶ ಜೆ.ಯೋಗೇಶ್ ಭೂಮಿಪೂಜೆ ನೆರವೇರಿಸಿ ಮಾತನಾಡಿ, ವಕೀಲರ ಸಂಘದ ಬಹು ಬೇಡಿಕೆಯಾಗಿದ್ದ ವಕೀಲರ ಭವನ ನಿರ್ಮಾಣಕ್ಕೆ ಅನುದಾನ ನೀಡಿರುವುದು ಶ್ಲಾಘನೀಯ, ಅದರಂತೆ ವಕೀಲರ ಭವನದಲ್ಲಿ ಸುಸಜ್ಜಿತ ಕೊಠಡಿ ಸೇರಿದಂತೆ ಮೂಲಭೂತ ಸೌಕರ್ಯಗಳಿಗೆ ಇನ್ನೂ ಹೆಚ್ಚಿನ ಅನುದಾನ ನೀಡಿದಲ್ಲಿ ಅನುಕೂಲವಾಗುವುದು ಎಂದು ತಿಳಿಸಿದರು.

ಕಿರಿಯ ಸಿವಿಲ್ ನ್ಯಾಯಾಧೀಶೆ ಮಹಾಲಕ್ಷ್ಮಿ, ಅಪರ ಸರ್ಕಾರಿ ವಕೀಲ ಕೆ.ಜಿ.ಶಿವಪ್ರಸಾದ್, ಸರ್ಕಾರಿ ಅಭಿಯೋಜಕಿ ವೈ.ಶಿಲ್ಪಾ, ವಕೀಲರಾದ ಜಿ.ಎಂ.ಮಲ್ಲಿಕಾರ್ಜುನ, ಜೆ.ಹೊನ್ನೂರಪ್ಪ, ಸಿ.ವಿರು ಪಾಕ್ಷಪ್ಪ, ಡಿ.ಕೆ.ಬಿ.ರಾಜು, ಟಿ.ಓಂಕಾರಪ್ಪ, ಡಿ.ಎಚ್.ದುರುಗೇಶ್, ವೆಂಕಟೇಶ, ಕೆ.ಎಚ್.ಎಂ.ಶೈಲಜಾ, ಎಂ.ಗುರುಸಿದ್ದನ ಗೌಡ, ವೀರೇಶ್ ಪಾಟೀಲ್, ಹೋ.ಮ.ಪಂಡಿತ ರಾಧ್ಯ, ಎಲ್.ಎಸ್.ಬಷೀರ್ ಅಹಮದ್ ಸೇರಿದಂತೆ ವಕೀಲರು, ಇತರರು ಇದ್ದರು.

# ಗುತ್ತಿಗೆದಾರರು ಕಾಮಗಾರಿ ಗುಣಮಟ್ಟ ಕಾಯ್ದುಕೊಳ್ಳಬೇಕು

## ಶಾಸಕ ಜೆ.ಎನ್.ಗಣೇಶ ಹೇಳಿಕೆ । ಕಂಪ್ಲಿ ತಾಲೂಕು ಗುತ್ತಿಗೆದಾರರ ಸಂಘ ಉದ್ಘಾಟನೆ

■ ಹಂಪಿ ಟೈಮ್ಸ್ ಕಂಪ್ಲಿ

ಗುತ್ತಿಗೆದಾರರು ಅತಿ ಆಸೆಗೊಳಗಾಗಿ ಮಿತಿ ಮೀರಿ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದು. ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿಯೇ ಕಾಮಗಾರಿ ಗಳನ್ನು ತೆಗೆದುಕೊಳ್ಳಬೇಕು ಎಂದು ಶಾಸಕ ಜೆ.ಎನ್.ಗಣೇಶ ಹೇಳಿದರು.

ಪಟ್ಟಣದ ಶ್ರೀರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಬುಧವಾರ ಕಂಪ್ಲಿ ತಾಲೂಕು ಗುತ್ತಿಗೆದಾರರ ಸಂಘ ಉದ್ಘಾಟಿಸಿ ಮಾತನಾಡಿದರು. ಗುತ್ತಿಗೆದಾರರು ರಾಜಕೀಯ ಮಾಡದೆ ಹಿಡಿದ ಕೆಲಸವನ್ನು ಗುಣಮಟ್ಟಕಾಯ್ದುಕೊಳ್ಳಲು ಹೆಚ್ಚಿನ ಮಹತ್ವ ನೀಡಬೇಕು. ರಾಜಕೀಯದಿಂದ ಒಂದೆರೆಡು ಬಾರಿ ಕಾಮಗಾರಿ ಪಡೆಯಬಹುದು. ಆದರೆ ಮಾಡಿದ ಗುಣಮಟ್ಟ ಕಾಮಗಾರಿಗಳೇ ನಿಮಗೆ ಮತ್ತೊಮ್ಮೆ ಅವಕಾಶಗಳನ್ನು ಕಲ್ಪಿಸುತ್ತವೆ ಎನ್ನುವುದನ್ನು ಮರೆಯಬಾರದು ಎಂದರು.

ಪುರಸಭಾ ಮಾಜಿ ಅಧ್ಯಕ್ಷ ಪಿ.ಬ್ರಹ್ಮಯ್ಯ ಮಾತನಾಡಿ, ಗುತ್ತಿಗೆದಾರರ ಸಂಕಷ್ಟಗಳನ್ನು ಅರಿಯುವಲ್ಲಿ ಸರ್ಕಾರ ಮುಂದಾಗಬೇಕು.



ಕಾಮಗಾರಿ ಆದತಕ್ಷಣವೇ ಬಿಲ್ ಮಾಡಿಕೊಡಬೇಕು. ಬಿಲ್ ಮಾಡಲು ಗುತ್ತಿಗೆದಾರರನ್ನು ಸತಾಯಿಸಬಾರದು ಎಂದರು.

ಅಧ್ಯಕ್ಷತೆವಹಿಸಿದ್ದ ಕಂಪ್ಲಿ ತಾಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷ ನಾಗಭೂಷಣಂ ಮಾತನಾಡಿ, ಸರ್ಕಾರ ಅನುದಾನ ಬಿಡುಗಡೆಗೊಳಿಸಿದ ಕಾಮಗಾರಿಗಳಿಗೆ ಮಾತ್ರ ಕರೆದು ಗುತ್ತಿಗೆದಾರರಿಗೆ ಕಾಮಗಾರಿ ನೀಡಬೇಕು. ಎಲ್ಲಾ ಗುತ್ತಿಗೆದಾರರಿಗೆ ಕಾಮಗಾರಿ ದೊರಕುವಂತೆ ತುಂಡು ಗುತ್ತಿಗೆ ಕಾಮಗಾರಿಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಪುರಸಭೆ ಮುಖ್ಯಾಧಿಕಾರಿ ಕೆ.ದುರುಗಣ್ಣ, ಪ್ರಮುಖರಾದ ಭಟ್ಟ ಪ್ರಸಾದ್, ಎಸ್.ಎಂ.ನಾಗರಾಜ, ಟಿ.ವಿ.ಸುದರ್ಶನರೆಡ್ಡಿ, ಬಳಗಾನೂರು ವೀರೇಶಪ್ಪ, ಎನ್.ಮಲ್ಲಿಕಾರ್ಜುನರೆಡ್ಡಿ, ಪುಲ್ಲಯ್ಯ, ಕೆ.ಷಣ್ಮುಖ, ಶ್ರೀನಿವಾಸ್, ಕೆ.ಎಂ.ಹೇಮಯ್ಯಸ್ವಾಮಿ, ಪದಾದಿ ,ಕಾರಿಗಳಾದ ಭಾಸ್ಕರ್‌ರೆಡ್ಡಿ, ರಮೇಶ ದೇವಲಾಪುರ, ಎನ್.ತಿಪ್ಪಯ್ಯ, ಬಾಲೇಸಾಬ್ ಎಮ್ಮಿಗನೂರು, ರಾಮಾಂಜನೇಯಲು ಸುಗ್ಗೇನಹಳ್ಳಿ, ಜಿ.ಮಹೇಶ ಮೆಟ್ರಿ ಸೇರಿ ಸಂಘದ ಎಲ್ಲಾ ನಿರ್ದೇಶಕರು ಇದ್ದರು.

Contact for Print & Digital Advertisements : 94486 33038


ರಾಮಸಾಗರದ ಹಿರಿಯ ವಿದ್ವಾಂಸರಾದ ಡಾ. ಎನ್. ಎಂ. ಗಿರಿಜಾಪತಿ ಇವರ ಸಂಪಾದಕತ್ವದ ಕವಿ ಷಡಕ್ಷರ ದೇವನ ಕನ್ನಡ ಚಂಪೂಕಾವ್ಯ

# ನಾಳೆ ಶಬರಶಂಕರ ವಿಳಾಸಂ ಲೋಕಾರ್ಪಣೆ

## ಡಿ.6 ರಂದು ಸಂಜೆ 5.30ಕ್ಕೆ ಕಂಪ್ಲಿಯ ಗಂಗಾಸಂಕೀರ್ಣದಲ್ಲಿ ಕಂಪ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬಿಡುಗಡೆ

■ ಹಂಪಿ ಟೈಮ್ಸ್ ಹೊಸಪೇಟೆ

ಶಬರ ಶಂಕರ ವಿಳಾಸ ಸಂಸ್ಕೃತದ ವ್ಯಾಸಭಾರತದ ಅರಣ್ಯ ಪರ್ವದಲ್ಲಿನ 37ರಿಂದ 40ನೆ ಅಧ್ಯಾಯಗಳಲ್ಲಿನ ಸನ್ನಿವೇಶಗಳನ್ನು ಆಧರಿಸಿದೆ. 'ಅರ್ಜುನ ಶಿವನಿಂದ ಪಾಶುಪತಾಸ್ತ್ರವನ್ನು, ಪಾರ್ವತಿಯಿಂದ ದಿವ್ಯ ಅಂಜನಾಸ್ತ್ರವನ್ನು ಪಡೆವ ಪ್ರಸಂಗವನ್ನು ಒಳಗೊಂಡ ಶಬರಶಂಕರ ವಿಳಾಸಂ ಕೃತಿಯನ್ನು ಡಿ.6 ರಂದು ಸಂಜೆ 5.30ಕ್ಕೆ ಕಂಪ್ಲಿಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕಂಪ್ಲಿಯ ಗಂಗಾ ಸಂಕೀರ್ಣದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಕೃತಿ ಸಂಪಾದಕ ರಾಮಸಾಗರದ ಹಿರಿಯ ವಿದ್ವಾಂಸರಾದ ಡಾ. ಎನ್. ಎಂ. ಗಿರಿಜಾಪತಿ ತಿಳಿಸಿದ್ದಾರೆ.




ಈ ಕಥಾಹಂದರದ ಪ್ರಸಂಗ ಸಂಸ್ಕೃತದಲ್ಲಿ ಭಾರವಿಯ ಕಿರಾತಾರ್ಜುನ ವಿಜಯಂ, ಕನ್ನಡದ ಕುಮಾರವ್ಯಾಸನ ಗದುಗಿನ ಭಾರತದಲ್ಲಿ, ವಿರೂಪಾಕ್ಷನ ಚೆನ್ನಬಸವಪುರಾಣದಲ್ಲಿ ಕಂಡು ಬರುತ್ತದೆ. ಆದರೆ ಆದಿ ಕವಿಪಂಪನಲ್ಲಿ ಈ ಪ್ರಸಂಗ ಇಲ್ಲ, ಕಾರಣ ಆತ ಜೈನನಾಗಿದ್ದು, ಶಿವಪಾರಮ್ಯದ ಪ್ರಸಂಗವನ್ನು ಹೇಳುವ ಅವಶ್ಯಕತೆಯ ಬಗ್ಗೆ ಚಿಂತಿಸದಿರಬಹುದೆಂದು ತೋರುತ್ತದೆ. ಇನ್ನು ಈ ಪ್ರಸಂಗವು ಶಿವಪುರಾಣಗಳಲ್ಲಿ ಹೇಳಲಾದ ಶಿವನ ಪಂಚವಿಂಶತಿ ಲೀಲೆಗಳಲ್ಲಿ ಶಿವ ಮತ್ತು ಅರ್ಜುನರ ಕಾಳಗದ ಪ್ರಸಂಗವೂ ಇದೆ. ಹಾಗಾಗಿ ಕವಿ ಷಡಕ್ಷರಿ ದೇವನಿಗೆ ಶಿವತತ್ವಾದರ್ಶದ ದಿವ್ಯತ್ವಗಳನ್ನು ನಿರೂಪಿಸಬೇಕೆಂಬ ಉತ್ಸಾಹಕ್ಕೆ ಈ ಕಥಾ ಎಳೆಗಳು ಕೈಲಾಸ ಮತ್ತು ಭೂಲೋಕವನ್ನು ಬೆಸೆದು ತೋರುತ್ತವೆ. ಶಬರಶಂಕರವಿಳಾಸದಲ್ಲಿ ಐದು ಅಧ್ಯಾಯಗಳಿದ್ದು, ಒಟ್ಟು 467 ಪದ್ಯಗಳು ಖ್ಯಾತಕರ್ಣಾಟಕ ವೃತ್ತಗಳು ಮತ್ತು ಕಂದ ಛಂದಸ್ಸಿನಲ್ಲಿವೆ. ಇದರಲ್ಲಿ ಮೂರು ಪದ್ಯಗಳಲ್ಲಿ ಒಂದು ಮಲ್ಲಿಕಾಯತ ಮಾಲೆ ಮತ್ತು ಎರಡು ತರಳ ವೃತ್ತಗಳಲ್ಲಿವೆ. ಮೊದಲ ಅಧ್ಯಾಯದಲ್ಲಿ ಶಂಕರನ ಆಸ್ಥಾನ, ನಂತರದಲ್ಲಿ ಕ್ರಮವಾಗಿ ಶಂಕರನ ಕಿರಾತ ಲೀಲೆ, ಬೇಟೆಯ ವರ್ಣನೆ, ಶಬರಶಂಕರ ಮತ್ತು ಅರ್ಜುನರ ಯುದ್ಧ ಹಾಗೂ ಕೊನೆಗೆ ಅರ್ಜುನನಿಗೆ ಶಿವ ಪಾಶುಪತಾಸ್ತ್ರ ಪ್ರದಾನ ಮಾಡಿದರೆ, ಶಿವೆಯೂ ಅರ್ಜುನನಿಗೆ ಅಂಜನಾಸ್ತ್ರವನ್ನು ಪ್ರದಾನಮಾಡುವುದರೊಂದಿಗೆ ಕಾವ್ಯ ಮುಕ್ತಾಯವಾಗುತ್ತದೆ. ಈ ಕಾವ್ಯವನ್ನು ಇಂದಿನ ಓದುಗರಿಗೆ ಅನುಕೂಲವಾಗಲೆಂದು ಪದಗಳನ್ನು ಬಿಡಿಸಿ ನೀಡಲಾಗಿದೆ. ಜೊತೆಗೆ ಅನ್ವಯಿಕ ಅರ್ಥ, ಭಾವಾನುವಾದ ಕಥೆಗೆ ಪೂರಕವಾಗಿರುವ ಉಪಕಥೆಗಳನ್ನು ಕೃತಿಯಲ್ಲಿ ನೀಡಲಾಗಿದೆ. ಕವಿ ಪ್ರಯೋಗಿಸಿರುವ ಅಲಂಕಾರಗಳನ್ನು ಪಟ್ಟಿ ಮಾಡಿ ಹೆಸರಿಸಲಾಗಿದೆ. ಅನುಬಂಧದಲ್ಲಿ ಕೃತಿಗೆ ಪೂರಕವಾದ ಮಹತ್ವದ ವಿವರಗಳನ್ನು ಒದಗಿಸಲಾಗಿದೆ.

ಡಾ. ಎನ್.ಎಂ. ಗಿರಿಜಾಪತಿ ಬಳ್ಳಾರಿ ಜಿ. ಹೊಸಪೇಟೆ ತಾ. ರಾಮಸಾಗರ ಗ್ರಾಮದವರು, ತಂದೆ ಕೀರ್ತಿಶೇಷರಾದ ಸೋಮಶೇಖರಯ್ಯ ಸ್ವಾಮಿ, ಹಾಗೂ ಶ್ರೀಮತಿ. ವಿಶಾಲಾಕ್ಷಮ್ಮ, ಎಂ.ಎ, (ಕನ್ನಡ), ಬಿ.ಈಡಿ, ಪಿ.ಎಚ್.ಡಿ ಪದವಿಧರರು. ಪ್ರೌಢಶಾಲೆಯಲ್ಲಿ ಕನ್ನಡ ಬೋಧಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿ, ಪದವಿ ಪೂರ್ವ, ಪದವಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಪದವಿ ಕಾಲೇಜಿನ ಪ್ರಾಂಶುಪಾಲರಾಗಿ, ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸಿದ್ದಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಕಿರುಸಂಶೋಧನಾ ಯೋಜನೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ ಇಲ್ಲಿನ ಕಿರುಸಂಶೋಧನಾ ಯೋಜನೆ, ನವದೆಹಲಿಯ ಕೇಂದ್ರ ಸಂಸ್ಕೃತಿ ಸಚಿವಾಲಯದ ರಾಷ್ಟ್ರೀಯ ಟಾಗೋರ್ ಸಾಂಸ್ಕೃತಿಕ ಸ್ಕಾಲರ್‌ಷಿಪ್ ಯೋಜನೆಯ ಸಂಶೋಧನೆ, ಭಾರತೀಯ ಭಾಷಾ ಸಂಸ್ಥಾನದ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರದಲ್ಲಿನ ಸೀನಿಯರ್ ಫೆಲೋ ಆಗಿ ಸಂಶೋಧನೆಗಳನ್ನು ಪೂರೈಸಿದ್ದಾರೆ.



ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯ ಪ್ರಕಾರಗಳಲ್ಲಿ ಇದುವರೆವಿಗೆ ಒಟ್ಟು 63 ಕೃತಿಗಳು ಪ್ರಕಟವಾಗಿವೆ. ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮತ್ತು ವಿಶ್ವವಿದ್ಯಾಲಯಗಳಲ್ಲಿನ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು, ತರಬೇತಿ ಶಿಬಿರಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಬಂಧ ಮಂಡಕರಾಗಿ, ಸಂಪನ್ಮೂಲವ್ಯಕ್ತಿಗಳಾಗಿ, ತರಬೇತುದಾರರಾಗಿ ಭಾಗವಹಿಸಿರುತ್ತಾರೆ. ಇವರ ವಿಜ್ಞಾನಪ್ರಬಂಧಕ್ಕೆ ಮುಂಬೈನ ಬಿ.ಎ.ಎ.ಆರ್.ಸಿಯಿಂದ ಗೌರವ ಪುರಸ್ಕಾರ ದೊರೆತಿದೆ. ನಾಟಕ ಕೃತಿಗೆ ಬೆಂಗಳೂರಿನ ವಿಶ್ವೇಶ್ವರಯ್ಯ ಇಂಡಸ್ಟ್ರೀಯಲ್ ಅಂಡ್ ಟೆಕ್ನಿಕಲ್ ಮ್ಯೂಜಿಯಂ ವತಿಯಿಂದ ಗೌರವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ವಚನ ರತ್ನತ್ರಯರು ಮತ್ತು ಭಾರತೀಯ ಯೋಗಮೀಮಾಂಸೆಗೆ ಕೃತಿಗೆ ದತ್ತಿ ಪುರಸ್ಕಾರಗಳು ದೊರೆತಿವೆ. ನಾಡಿನ ಪ್ರಮುಖ ಸಂಘಸಂಸ್ಥೆಗಳಿಂದ ವಿವಿಧ ಗೌರವ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಕರ್ನಾಟಕದ ಗಡಿಜಿಲ್ಲೆಯಾದ ಚಾಮರಾಜನಗರದ ಎಳಂದೂರಿನಲ್ಲಿದ್ದ ಷಡಕ್ಷರಿ ದೇವ (ಕ್ರಿ.ಶ 1750) ಯಳಂದೂರಿನಲ್ಲಿನ ವೀರಶೈವಮಠದ ಮಠಾಧಿಪತಿ. ಕನ್ನಡದಲ್ಲಿ ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಹಾಗೂ ಶಬರಶಂಕರ ವಿಳಾಸ, ಸಂಸ್ಕೃತದಲ್ಲಿ ಕವಿಕರ್ಣರಸಾಯನ ಇದು ಕಾವ್ಯ, ಶಿವಸ್ತೋತ್ರ ಮಂಜರಿ, ಶಿವಸ್ತವ ಮಂಜರಿ, ಶ್ರೀಮದಾನದಿ ಸಿದ್ಧಲಿಂಗಸ್ತವ, ಇಂದುಧರ ಸ್ತೋತ್ರ, ಶಿವಮಾನಸ ಸ್ತೋತ್ರ, ಇಷ್ಟಲಿಂಗ ಸ್ತವನ, ನೀಲಾಂಬಿಕ ಸ್ತೋತ್ರಗಳು, ಅಷ್ಟಕಗಳಲ್ಲಿ ನಮಃಶಿವಾಯಷ್ಟಕ, ಬಸವಾಷ್ಟಕ, ಮಂಗಲಾಷ್ಟಕ, ಲಿಂಗಾಷ್ಟಕ, ಇತರೇ ಕೃತಿಗಳಲ್ಲಿ ಶಿವಾಧಿಕ್ಯ ರತ್ನಾವಳೀ, ವೀರಭದ್ರ ದಂಡಕ, ವೀರಭದ್ರೋದಾಹರಣ ಗದ್ಯ ಮುಂತಾದ ಒಳಗೊಂಡಂತೆ 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿನ ಮೆಟ್ರಿಕ್ ನಂತರದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿ ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಈ ಹಿಂದೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಡಿಸೆಂಬರ್ 20ರ ವರೆಗೆ ವಿಸ್ತರಿಸಲಾಗಿದೆ.

ಮೆಟ್ರಿಕ್ ನಂತರದ ಕೋರ್ಸುಗಳಾದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿ ಪರ ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ವಿದ್ಯಾರ್ಥಿಗಳು https://ssp.postmatric.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು, ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿ ಪಡೆಯಲು https://bcwd.karnataka.gov.in ವೆಬ್‌ಸೈಟ್ ಗೆ ಭೇಟಿ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂ.ಸಂ: 8050770005, ಇ–ಮೇಲ್ bcwdhelpline@gmail.com ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಸಹಾಯವಾಣಿ ದೂ. ಸಂ: 1902 ಅಥವಾ ಇ–ಮೇಲ್ postmatrichelp@karnataka.gov.in ಗೆ ಭೇಟಿ ನೀಡಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಮಚಂದ್ರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.14ರಂದು ರಾಷ್ಟ್ರೀಯ ಲೋಕ್ ಅದಾಲತ್

# ರಾಜೀಯಾಗಬಲ್ಲ ಪ್ರಕರಣಗಳ ಸುಲಭ ಇತ್ಯರ್ಥಕ್ಕೆ ಅವಕಾಶ: ನ್ಯಾ. ಮಹಾಂತೇಶ ದರಗದ

■ ಹಂಪಿ ಟೈಮ್ಸ್ ಕೊಪ್ಪಳ

ಡಿಸೆಂಬರ್ 14ರಂದು ಕೊಪ್ಪಳ ಜಿಲ್ಲೆಯಾದ್ಯಂತ ಹಮ್ಮಿಕೊಂಡಿರುವ "ರಾಷ್ಟ್ರೀಯ ಲೋಕ್ ಅದಾಲತ್" ಕಾರ್ಯಕ್ರಮದಲ್ಲಿ ರಾಜೀ ಆಗಬಹುದಾದ ಎಲ್ಲಾ ತರಹದ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ ಹೇಳಿದರು.

ಅವರು ಬುಧವಾರ ಕೊಪ್ಪಳ ಜಿಲ್ಲಾ ನ್ಯಾಯಾಲಯದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳ ಕಚೇರಿ ಸಭಾಂಗಣದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಕೊಪ್ಪಳ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಡಿ.14ರಂದು ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದ್ದು, ಜಿಲ್ಲೆಯ ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. ಯಾವುದೇ ಖರ್ಚು ಇಲ್ಲದೇ ಶೀಘ್ರ ತೀರ್ಮಾನಕ್ಕಾಗಿ ಲೋಕ್ ಅದಾಲತ್ ಒಂದು ವಿಶೇಷ ಅವಕಾಶವಾಗಿದೆ.



ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ದಾವೆದಾರರು ಹಾಗೂ ಕಕ್ಷಿದಾರರು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.

ನ್ಯಾಯಾಲಯಗಳಲ್ಲಿ ಉಭಯ ಪಕ್ಷಗಾರರು ರಾಜೀ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಲಾಗುವುದು. ಇಬ್ಬರಿಗೂ ಒಪ್ಪಿಗೆಯಾಗುವಂತೆ ಪ್ರಕರಣವು ತೀರ್ಮಾನವಾಗುವುದರಿಂದ ಬಾಂಧವ್ಯವು ಉಳಿದು ವಿವಾದಗಳು ತೀರ್ಮಾನವಾಗುತ್ತದೆ. ರಾಜೀ ಸಂದಾನದಲ್ಲಿ ಯಾವುದೇ ವ್ಯಕ್ತಿಗಳಿಗೆ ಸೋಲು ಇರುವುದಿಲ್ಲ. ಇಬ್ಬರಿಗೂ ಗೆಲುವಿನಲ್ಲಿರಲು ಸಾಧ್ಯವಾಗುವುದರ ಜೊತೆಗೆ ಸಂಬಂಧಗಳನ್ನು ಒಳ್ಳೆಯ ರೀತಿಯಲ್ಲಿರಲು ಸಾಧ್ಯವಾಗುತ್ತದೆ. ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ಪ್ರಕರಣಗಳನ್ನು ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡಲ್ಲಿ ಸಿವಿಲ್ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು. ಸಂಧಾನಕಾರರು ಸೂಚಿಸುವ ಪರಿಹಾರ ಒಪ್ಪಿಗೆಯಾದಲ್ಲಿ ಮಾತ್ರ ರಾಜೀ ಮಾಡಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದವರು ಇಂತಹ ಲೋಕ್ ಅದಾಲತ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎಂದು ಹೇಳಿದರು.

ಈ ಹಿಂದೆ ಸೆಪ್ಟೆಂಬರ್ 14ರಂದು ಜಿಲ್ಲೆಯಲ್ಲಿ ನಡೆದ ಲೋಕ್ ಅದಾಲತ್ ಮೂಲಕ ನ್ಯಾಯಾಲಯದಲ್ಲಿ ಬಾಕಿ ಇರುವ 3328 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದ್ದು, ರೂ. 55 ಕೋಟಿ 38 ಲಕ್ಷಕ್ಕೂ ಅಧಿಕ ಮೊತ್ತವು ವಸೂಲಾತಿಯಾಗಿ ಸರ್ಕಾರಕ್ಕೆ ಪಾವತಿ ಮಾಡಲಾಗಿದೆ. ಹೀಗೆ ರಾಜೀ ಸಂದಾನ ಮೂಲಕ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ರಾಜೀ ಮಾಡುವುದರಿಂದ ನ್ಯಾಯಾಲಯದಲ್ಲಿ ಉಂಟಾಗುವ ಒತ್ತಡ ಕಡಿಮೆಯಾಗುವುದರ ಜೊತೆಗೆ ವಿಶೇಷವಾಗಿ ನ್ಯಾಯಾಲಯಕ್ಕೆ ಬರುವ ಜನರಿಗೆ ಹಾಗೂ ಪಕ್ಷಗಾರರಿಗೆ ಒಳ್ಳೆಯ ನ್ಯಾಯ ಸಿಗುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ 35 ಸಾವಿರಕ್ಕೂ ಅಧಿಕ ಪ್ರಕರಣಗಳು ಬಾಕಿ ಇದ್ದು, ಈ ಬಾರಿಯ ಲೋಕ್ ಅದಾಲತ್‌ನಲ್ಲಿ ಹೆಚ್ಚು ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ವಾರ್ತಾಧಿಕಾರಿ ಸುರೇಶ್ ಜಿ., ಪತ್ರಕರ್ತರು ಸೇರಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಉಪಸ್ಥಿತರಿದ್ದರು.

## ನಿಧನ : ಶೀಲಾ ಬಾಯಿ. ಆರ್. ಕಾಟ್ವಾ.



**ಹಗರಿಬೊಮ್ಮನಹಳ್ಳಿ:** ಹಳೇ ಹಗರಿಬೊಮ್ಮನ ಹಳ್ಳಿಯ ಖ್ಯಾತ ವೈದ್ಯ ರಾಮಚಂದ್ರ ಸಾ ಕಾಟವಾ ಇವರ ಧರ್ಮ ಪತ್ನಿ ಶ್ರೀಮತಿ ಶೀಲಾ ಬಾಯಿ ಕಾಟ್ವಾ ಬುಧವಾರ ಬೆಳಗಿನ ಜಾವ ನಿಧನರಾದರು. ಮೃತರಿಗೆ, ಪತಿ, ಪುತ್ರ. ಮೂವರು ಪುತ್ರಿಯರು. ಆರು ಜನ ಸಹೋದರ ರು. ಆರು ಜನ ಸಹೋದರಿಯರು. ಅಳಿಯಂದಿರು ಇದ್ದಾರೆ. ಮೃತರಿಗೆ ತಾಲ್ಲೂಕು ಎಸ್. ಎಸ್. ಕೆ. ಸಮಾಜ, ಹಾಗೂ ಮಹಿಳಾ ಸಮಾಜದವರು ಸಂತಾಪ ಸೂಚಿಸಿದ್ದಾರೆ.

Grow Your Business With Us




S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

## ಅಂಚೆ ಇಲಾಖೆ; ಡಿ.16 ರಂದು ನೇರ ಸಂದರ್ಶನ

■ ಹಂಪಿ ಟೈಮ್ಸ್ ಬಳ್ಳಾರಿ

ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರಪ್ರತಿನಿಧಿ ಮತ್ತು ಮತ್ತು ಫೀಲ್ಡ್ ಆಫೀಸರ್‌ಗಳ ನೇಮಕಕ್ಕಾಗಿ ಡಿ.16 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ, ನಗರದ ಕೋಟೆ ಆವರಣದ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ.

**ಅರ್ಹತೆ:** ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಪ್ರದೇಶದಲ್ಲಿ ವಾಸಿಸುತ್ತಿದ್ದರೆ 10ನೇ ತರಗತಿ ಉತ್ತೀರ್ಣರಾಗಿರಬೇಕು. ಐದು ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಇತರೆ ಪ್ರದೇಶಗಳಿಗೆ 12ನೇ ತರಗತಿ ಉತ್ತೀರ್ಣರಾಗಿರಬೇಕು.

ಬಳ್ಳಾರಿ ಹಾಗೂ ವಿಜಯನಗರ(ಹೊಸಪೇಟೆ) ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸಿಸುವ ವಿಳಾಸ ಪುರಾವೆಯನ್ನು ಹೊಂದಿರಬೇಕು. ವಯೋಮಿತಿ 18 ವರ್ಷ, ಗರಿಷ್ಠ ವಯಸ್ಸಿನ ಮಿತಿ ಇರುವುದಿಲ್ಲ.

**ನೋಂದಣಿಯ ಸಮಯ:** ಬೆಳಗ್ಗೆ 10:30 ರಿಂದ 11:30 ರ ವರೆಗೆ. ಹೆಚ್ಚಿನಮಾಹಿತಿಗಾಗಿ ಡೆವಲಪ್‌ಮೆಂಟ್ ಆಫೀಸರ್ ಮಾರುತಿ.ವಿ (ಮೊ.9481694420) ಹಾಗೂ ಅಂಚೆ ಅಧೀಕ್ಷಕರ ಕಾರ್ಯಾಲಯ ಅಥವಾ ದೂ.08392-266768 ಗೆ ಸಂಪರ್ಕಿಸಬಹುದು ಎಂದು ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಆಶಾ ಕಾರ್ಯಕರ್ತೆಯರಿಗೆ ಮಾಸಿಕ 15ಸಾವಿರ ಗೌರವಧನ ನೀಡಿ

### ಆಶಾ ಕಾರ್ಯಕರ್ತೆಯರ ಆಗ್ರಹ | ಶಾಸಕ ಗಣೇಶ ಅವರಿಗೆ ಮನವಿ




■ ಹಂಪಿ ಟೈಮ್ಸ್ ಕಂಪ್ಲಿ

ದಿನದಿಂದ ದಿನ ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಗುತ್ತಿವೆ. ಮಕ್ಕಳ ಶೈಕ್ಷಣಿಕ ಕನಸು ಕಮರುತ್ತಿವೆ. ಆಶಾ ಕಾರ್ಯಕರ್ತೆಯರಿಗೆ ಮಾಸಿಕ 15ಸಾವಿರ ರೂಪಾಯಿಗಳ ಗೌರವಧನ, ನಗರದ ಕಾರ್ಯಕರ್ತೆಯರಿಗೆ 2 ಸಾವಿರ ರೂಪಾಯಿ ಹೆಚ್ಚಿನ ಮಾಸಿಕ ಗೌರವಧನ ನೀಡಬೇಕು ಎಂದು ಒತ್ತಾಯಿಸಿ ಬುಧವಾರ ಶಾಸಕ ಜೆ.ಎನ್.ಗಣೇಶ್ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ತಾಲೂಕು ಅಧ್ಯಕ್ಷೆ ಜೆ. ಮಹಾಲಕ್ಷ್ಮಿ ಮಾತನಾಡಿ, ಒತ್ತಾಯ ಪೂರ್ವಕ ಮೊಬೈಲ್ ಕೆಲಸ ಕೈಬಿಡಬೇಕು, ಮೊಬೈಲ್ ಕೆಲಸ ಬಾರದವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಮೊಬೈಲ್ ಡಾಟ ಒದಗಿಸಬೇಕು. 60 ವರ್ಷಕ್ಕೆ ಸೇವಾ ನಿವೃತ್ತಿಹೊಂದುವ ಕಾರ್ಯಕರ್ತೆಯರಿಗೆ 3ಲಕ್ಷ ರೂಪಾಯಿಗಳ ಪಿಂಚಣಿ ನೀಡಬೇಕು. ಕರ್ತವ್ಯನಿರತ ಅನಾಹುತಗಳಿಗೆ ಇಲಾಖೆ ಹೊಣೆಹೋರಬೇಕು. ಪ್ರತಿ ವರ್ಷ ಕಾರ್ಯಕರ್ತೆಯರ ಆರೋಗ್ಯ ತಪಾಸಣೆ ಮಾಡಿಸಿ ಉಚಿತ ಚಿಕಿತ್ಸೆ ಕೊಡಿಸಬೇಕು, ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಟ ವೇತನ, ಗ್ರಾಜ್ಯುಟಿ, ಪಿಎಫ್, ಇಎಸ್‌ಐ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಪದಾಧಿಕಾರಿಗಳಾದ ಎಚ್. ಚಂದ್ರಲೇಖಾ, ಯು.ಪದ್ಮಾವತಿ, ಬಿ.ಲಕ್ಷ್ಮಿ, ವಿ.ಟಿ.ಅನುಸೂಯ, ಅನಿತಾ, ಸಾವಿತ್ರಮ್ಮ, ವೆಂಕಟಪದ್ಮಾ, ಸೂರಯ್ಯಾ, ಖಾಸಿಂಬೀ ಇತರರು ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.



ಹೊಸಪೇಟೆಯ ಸಮಾಜ ಸೇವಕಿ, ಉದ್ಯಮಿ, ಕೆ.ಪಿ.ಸಿ.ಸಿ.ಪ್ರಧಾನ ಕಾರ್ಯದರ್ಶಿ ಬಿ.ಎಲ್.ರಾಣಿ ಸಂಯುಕ್ತ ಅವರ ಜನ್ಮದಿನದಂಗವಾಗಿ ಬುಧವಾರ ಅವರ ಅಭಿಮಾನಿ ಬಳಗ, ವಿವಿಧ ಸಮಾಜದ ಮುಖಂಡರು ತಂಡೋಪತಂಡವಾಗಿ ಅವರ ನಿವಾಸಕ್ಕೆ ತೆರಳಿ ಜನ್ಮದಿನದ ಶುಭ ಕೋರಿದರು. ಪತಿ ಕೆ.ಬಿ.ಶ್ರೀನಿವಾಸ ರೆಡ್ಡಿ, ಪುತ್ರ ರಾಜವರ್ಧನ ರೆಡ್ಡಿ ಸೇರಿದಂತೆ ಸಮಾಜದ ಮುಖಂಡರು ಇದ್ದರು.

## ಯುವನಿಧಿ ಯೋಜನೆಯಡಿ ನೋಂದಾಯಿಸಿಕೊಳ್ಳಿ

■ ಹಂಪಿ ಟೈಮ್ಸ್ ಬಳ್ಳಾರಿ

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲೊಂದಾದ ಯುವನಿಧಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹ ಪದವೀಧರರು, ಸ್ನಾತಕೋತ್ತರ ಪದವೀಧರರು ಮತ್ತು ಡಿಪ್ಲೋಮಾ ಪದವೀಧರರು ನೋಂದಾಯಿಸಿಕೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವಾರ್ಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.

ಈ ಯೋಜನೆಯಡಿ ಪದವೀಧರರಿಗೆ ರೂ.3000 ಮತ್ತು ಡಿಪ್ಲೋಮಾ ಪದವೀಧರರಿಗೆ ರೂ.1500 ನೀಡಲಾಗುತ್ತದೆ. 2023-24 ಮತ್ತು 2024-25 ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಉತ್ತೀರ್ಣರಾದ ಅಭ್ಯರ್ಥಿಗಳು ಆನ್‌ಲೈನ್ ಸೇವಾ ಸಿಂಧು ಪೋರ್ಟಲ್, ಅಟಲ್ ಜೀ ಕೇಂದ್ರ, ಕರ್ನಾಟಕ-1, ಬಳ್ಳಾರಿ-1 ಮತ್ತು ಇತರೆ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು.

*ಅರ್ಹತೆ:*

ಪದವಿ, ಡಿಪ್ಲೋಮಾ ನಂತರ ಕನಿಷ್ಠ 6 ತಿಂಗಳ/180 ದಿನಗಳ ಅವಧಿಯವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಅಥವಾ ಸ್ವಯಂ ಉದ್ಯೋಗ ಹೊಂದಿಲ್ಲದವರಾಗಿರಬೇಕು.

ಉನ್ನತ ವಿದ್ಯಾಭ್ಯಾಸ ಮುಂದುವರಿಸದೇ ಇರುವವರು ಅರ್ಹರು. ಕರ್ನಾಟಕದಲ್ಲಿ ವಾಸವಿರುವವರು (ಕನಿಷ್ಠ 6 ವರ್ಷಗಳವರೆಗೆ ಪದವಿ, ಡಿಪ್ಲೋಮಾ ಅಧ್ಯಯನ ಮಾಡಿದವರು). ಹೆಚ್ಚಿನ ಮಾಹಿತಿಗಾಗಿ ಮೊ.9742718891, 8277000619, 9900827768, 6360408094, 8861866752 ಹಾಗೂ ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

### ಜಿಲ್ಲಾ ಮಟ್ಟದ ಸಿರಿಧಾನ್ಯ, ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ

## ಸರ್ಕಾರಿ ಕಾರ್ಯಕ್ರಮಗಳಲ್ಲಿ ಸಿರಿಧಾನ್ಯ ಬಳಸಿ

### ಕೊಪ್ಪಳ ಜಿಲ್ಲಾ ಪಂಚಾಯತ ಸಿಇಒ ರಾಹುಲ್ ರತ್ನಂ ಪಾಂಡೇಯ ಹೇಳಿಕೆ



■ ಹಂಪಿ ಟೈಮ್ಸ್ ಕೊಪ್ಪಳ

ಸರ್ಕಾರದಿಂದ ನೆಡೆಯುವ ಸಭೆ ಸಮಾರಂಭಗಳಲ್ಲಿ ಸಿರಿಧಾನ್ಯ ಖಾದ್ಯಗಳನ್ನು ಬಳಕೆ ಮಾಡುವಂತೆ ಕೊಪ್ಪಳ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಬುಧವಾರ ನಗರದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಲ್ಲಿ ಕೃಷಿ ಇಲಾಖೆ ಹಾಗೂ ಐ ಸಿ ಎ ಆರ್ ಕೃಷಿ ವಿಜ್ಞಾನ ಕೇಂದ್ರ ಕೊಪ್ಪಳ ವತಿಯಿಂದ ಆಯೋಜಿಸಲಾಗಿದ್ದ "ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ" ಕಾರ್ಯಕ್ರಮ ಉಧ್ಘಾಟಿಸಿ ಮಾತನಾಡಿದರು. ಸಿರಿಧಾನ್ಯದ ಉತ್ಪನ್ನಗಳನ್ನು ಅಂಗನವಾಡಿ ಮತ್ತು ಶಾಲೆಗಳ ಆಹಾರದ ಮೆನುಗಳಲ್ಲಿ ಸೇರಿಸಬೇಕು ಸಿರಿಧಾನ್ಯ ಬಳಕೆಯಿಂದ ಮಕ್ಕಳಿಗೆ ಮತ್ತು ತಾಯಂದಿರ ಆರೋಗ್ಯ ವೃದ್ಧಿಯಾಗುತ್ತದೆ. ಸಿರಿಧಾನ್ಯಗಳು ಪೋಷಕಾಂಶ ಗಳಿಂದ ಸಮೃದ್ಧವಾಗಿದ್ದು, ಹೃದಯ ಆರೋಗ್ಯ, ಮೆದುಮೇಹ ನಿಯಂತ್ರಣ ಮತ್ತು ತೂಕ ಸಮತೋಲನಕ್ಕೆ ಸಹಾಯ ಮಾಡುತ್ತವೆ. ಈ ಆಹಾರಗಳ ಉಪಯುಕ್ತತೆ ಬಗ್ಗೆ ರೀತಿಯ ಸ್ಪರ್ಧೆಗಳು ನಮ್ಮ ಪಾರಂಪರಿಕ ಆಹಾರ ಪದ್ಧತಿಗಳನ್ನು ಮತ್ತೆ ಜನಪ್ರಿಯಗೊಳಿಸಲು ಸಹಾಯ ಮಾಡುತ್ತವೆ. ಈ ಕಾರ್ಯಕ್ರಮದಿಂದ ಜನರು ತಮ್ಮ ದಿನನಿತ್ಯದ ಆಹಾರ ಪದ್ಧತಿಯಲ್ಲಿ ಸಿರಿಧಾನ್ಯಗಳನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹವಾಗುತ್ತದೆ. ಈ ಆಹಾರಗಳ ಉಪಯುಕ್ತತೆ ಬಗ್ಗೆ ಸಾರ್ವಜನಿಕರಿಗೆ ತಿಳಿಸುವುದು ಅತೀ ಅವಶ್ಯಕವಾಗಿದೆ ಎಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್ ಅವರು, ಸಿರಿಧಾನ್ಯಗಳ ಸಂಸ್ಕರಣೆ, ಬ್ರಾಂಡಿಂಗ್, ಪ್ಯಾಕಿಂಗ್ಗಳನ್ನು ಎಸ್.ಹೆಚ್.ಜಿ ಹಾಗೂ ಎಫ್.ಪಿ.ಓ.ಗಳ ಮೂಲಕ ಬೆಳೆಸುವುದು ಮತ್ತು ಮಾಡಿಸುವುದರ ಬಗ್ಗೆ ತಿಳಿಸಿದರು.

ಸ್ಪರ್ಧೆಯಲ್ಲಿ ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಕಾರಟಗಿ ಹಾಗೂ ಗಂಗಾವತಿಯ ವಿವಿಧ ಗ್ರಾಮಗಳಿಂದ ಒಟ್ಟು 50 ಜನ ಮಹಿಳೆಯರು ಭಾಗವಹಿಸಿ ನವಣೆ, ಸಜ್ಜೆ, ಹಾರಕ, ಬರಗು, ಸಾಮೆ, ಕುಸುಬೆ, ಅಗಸೆ ಮುಂತಾದ ಧಾನ್ಯಗಳಿಂದ ಒಟ್ಟು 106 ತರಹದ ಖಾದ್ಯಗಳನ್ನು ಪ್ರದರ್ಶಿಸಿದರು. ಸಿರಿಧಾನ್ಯ ಹಾಗೂ ಮರೆತುಹೋದ ಖಾದ್ಯಗಳ ತಿನಿಸುಗಳ ತೀರ್ಪುಗಾರರಾಗಿ ಡಾ. ಕವಿತಾ, ಡಾ. ರಾಧಾ, ಡಾ. ರೇವತಿ, ಡಾ.ರಾಘವೇಂದ್ರ ಎಲಿಗಾರ ವಿಜ್ಞಾನಿಗಳು ಭಾಗವಹಿಸಿದರು.

ಫಲಿತಾಂಶ: ಸಿರಿಧಾನ್ಯ ಖಾರ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಸುಖಿರಾಣಿ ಕೊಪ್ಪಳ, ದ್ವಿತಿಯ ಸ್ಥಾನವನ್ನು ಸಹನಾ ಮೇವುಂಡಿ, ತೃತೀಯ ಸ್ಥಾನವನ್ನು ಹುಲಿಗೆಮ್ಮ ಕಾಂಬಳೆ ಮುನಿರಾಬಾದ್ ಇವರು ಪಡೆದರು. ಸಿರಿಧಾನ್ಯ ಸಿಹಿ ವಿಭಾಗದಲ್ಲಿ ಪ್ರಥಮ ಸ್ಥಾನ ಸೌಮ್ಯ ಪಾಟೀಲ್ ಯತ್ನಟ್ಟಿ, ದ್ವಿತಿಯ ಸ್ಥಾನ ಕೊಟ್ರಮ್ಮ ಹಿಡಿಕಿಮಠ ಮೈನಳ್ಳಿ ಹಾಗೂ ತೃತೀಯ ಸ್ಥಾನವನ್ನು ಜಯಶ್ರೀ ಶಶಿಮಠ ಸಿದ್ದಾಪೂರ ಪಡೆದರು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ದೆಯ ವಿಭಾಗದಲ್ಲಿ ಪ್ರಥಮ ಸ್ಥಾನ ಸುಮಂಗಲಾ ಬಂಡಿ ಹೊಸಲಿಂಗಪುರ, ದ್ವಿತಿಯ ಸ್ಥಾನ ವಿಜಯಲಕ್ಷ್ಮೀ ಮುದುಗಲ್ ಕೊಪ್ಪಳ ಹಾಗೂ ತೃತೀಯ ಸ್ಥಾನ ಶಿವಲಿಲಾ ಹುರಕಡ್ಲಿ ಕಾರಟಗಿ ಇವರು ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಶಶಿಕಲಾ, ಸಹಾಯಕ ಕೃಷಿ ನಿರ್ದೇಶಕ ಜೀವನಸಾಬ ಹಾಗೂ ಅಜ್ಮೀರ ಅಲಿ, ಎಇಸಿ ವಾಮನಮೂರ್ತಿ, ಕೃಷಿ ಅಧಿಕಾರಿಗ 'ಳಾದ ಯೋಗೇಶ, ಪ್ರಕಾಶ ಚವಡಿ, ಎಂ.ಎಂ ಹಸನ್, ಮೊಹ್ಮದ್ ಗೇಸುದರಾಜ, ಸ್ಮಿತಾ ಹಾಗೂ ಜ್ಯೋತಿ ಸೇರಿದಂತೆ ಇಲಾಖೆ ಸಿಬ್ಬಂದಿ ಮತ್ತಿತರರಿದ್ದರು.

## ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳ ನೇಮಕ: ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಸರ್ಕಾರದ ಇಡಿಸಿಎಸ್ ನಿರ್ದೇಶನಾಲಯದ ಇ-ಆಡಳಿತ ಇಲಾಖೆಯ ನಿರ್ದೇಶನದಂತೆ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಒನ್ ಸೇವಾ ಕೇಂದ್ರಗಳಿಗೆ ಫ್ರಾಂಚೈಸಿಗಳನ್ನು ನೇಮಕ ಮಾಡಲು ಆಸಕ್ತ ಅರ್ಹ ಆಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಜಿಲ್ಲೆಯ 11 ಗ್ರಾಮ - ಒನ್ ಕೇಂದ್ರಗಳಿಗೆ ಫ್ರಾಂಚೈಸಿಯನ್ನು ನೇಮಕ ಮಾಡಲು ಉದ್ದೇಶಿಸಲಾಗಿದೆ. ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ, ಕಂಪ್ಲಿ ತಾಲ್ಲೂಕಿನ ದೇವಸಮುದ್ರ, ಕುರುಗೋಡು ತಾಲ್ಲೂಕಿನ ಬಾದನಹಟ್ಟಿ ಮತ್ತು ಸಂಡೂರು ತಾಲ್ಲೂಕಿನ ಅಂತಾಪುರ, ಬನ್ನಿಹಟ್ಟಿ, ಭುಜಂಗನಗರ, ಸುಶೀಲನಗರ, ಯಶವಂತನಗರ ಗ್ರಾಮ ಪಂಚಾಯತಿ.

ಖಾಲಿಯಿರುವ ಗ್ರಾಮ ಒನ್ ಕೇಂದ್ರಗಳ ವಿವರ ಮತ್ತು ಅರ್ಜಿ ಸಲ್ಲಿಸಲು https://kal-mys.gramaone.karnataka.gov.in/ ಗೆ ಭೇಟಿ ನೀಡಬಹುದು. ನಾಗರೀಕ ಸೇವಾ ಕೇಂದ್ರ ಗ್ರಾಮ ಒನ್ ಫ್ರಾಂಚೈಸಿಯನ್ನು ಬಯಸು ವವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬ ಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನ ಡಿಸೆಂಬರ್ 15 ಆಗಿರುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

Sub : ENGLISH (S.L) Prose : **The Discovery** (Continued)

**Most important 3 marks questions and answers.**

**1."Inspite of hardships, Columbus succeeded in his mission." How? OR "Columbus had a strong will power, patience, and perseverance." Justify the statement.**

**Ans :** Columbus had been appointed by the king of Spain Ferdinand to discover the new land. On his voyage he was very much disciplined, determined and persevered. But his crew and seamen were not so. They used to drink wine and even by singing symbolically expressed their discontent over the voyage. They planned to go back to their homes. When Columbus became furious, Pedro defended that they were simple men. They wanted to relax by drinking wine because that was their only relaxation. Besides they did not have the vision as Columbus. Whereas the captain was a visionary man who not only discovered the new land but also the loyalty is as temporary as the sea weeds. So he said that we should not expect always the friendship, discipline, obedience, and loyalty from others.

**2. How does Pedro try to defend the drunken seamen? Was Pedro right in defending the seamen?**

**Ans :** When Columbus knew that the seamen were drinking too much. Pedro defended that they were simple men and that was their only relaxation. When they drink they would forget their desperation. Besides they did not have the same vision as Columbus. Pedro was not right in defending the seamen because their drinking was leading to misbehavior.

**3. How can you say that Pepe was the only loyal servant to Columbus till the end? OR How did Pepe prove his loyalty to Columbus?**

**Ans :** The only obedient servant of Columbus was Pepe. He excitedly declared that he was loyal to his leader and always wanted to be with Columbus. Pepe tried to protect Columbus when Guillermo and other seamen were trying to attack him except the officer Pedro. Pepe stopped them by spreading his arms in the middle. Columbus thought that the child stood between him and death.

**4. How did the crew members express their discontent with Columbus? OR How did the seamen show their anger towards Columbus?**

**Ans :** The crew members sailed for days and months but they could not see the land. The sailors suffered a lot of home sick and wanted to go back to their homes. Desperately started to drink too much and sang themselves to forget their disappointment. They revolted against Columbus. When Columbus called Guillermo he refused and called him a devil. Diego compared the seamen to bats flying by day. Finally they conspired to kill Columbus.

www.hampitimes.com - Hampi Times Margadarshi

**ಉತ್ತಮ ಫಲಿತಾಂಶಕ್ಕೆ ಪಂಚ ಸೂತ್ರಗಳು ಪಾಲಿಸಿ**

1. ಸಮಯ ನಿರ್ವಹಣೆ 2. ನಿಮ್ಮ ಗುರಿಯನ್ನು ನೆನೆಸಿಕೊಳ್ಳಿ 3. ಆರೋಗ್ಯ ನಿರ್ವಹಣೆ 4. ಶಾಂತ ಮನಸ್ಥಿತಿ ಇಟ್ಟುಕೊಳ್ಳಿ 5. ನಕಾರಾತ್ಮಕವಾಗಿ ಚಿಂತಿಸಬೇಡಿ

Prepared by : R.B.Grubasavaraj Asst Teacher. G.H.S.Basarakodu, H.B.Halli Taluk, Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ